(MR. SPEAKER.)

is a reference to that in the Statement of Objects and Reasons and it must be modified in the Bill itself.

Sri M. LINGANNA.—Under Rule 88, this may kindly be taken up tomorrow.

Mr. SPEAKER.—The Hon'ble Minister may make a motion under rule 88.

Sri KADIDAL MANJAPPA.—Sir, I beg to move:

"That under rule 88 of the Rules of Procedure and Conduct of Business in the Legislative Assembly, further consideration of the Bill may be taken up tomorrow."

Mr. SPEAKER.—The question is:

"That under rule 88 of the Rules of Procedure and Conduct of Business in the Legislative Assembly, further consideration of the Bill may be taken up tomorrow."

The motion was adopted.

MYSORE VILLAGE OFFICES (AMENDMENT) BILL 1953.

Motion to consider.

Sri KADIDAL MANJAPPA (Minister for Revenue and Public Works).—Sir, I move:

"That the Mysore Village Offices (Amendment) Bill, 1953, be taken into consideration."

Sir, it has been already stated in the Statement of Objects and Reasons that section 7 of the Mysore Village Offices Act now in force does not give powers to the Revenue Officers to suspend village officers for misconduct pending enquiry. As Hon'ble Members know very well, in the case of Government servants, if there is a *prima facie* case, they can be kept under suspension. But under section 7 of the Village Offices Act, the village officers cannot be kept under suspension until an enquiry is held by a competent authority. To avoid inconvenience the amending Bill has been brought forward.

1 P.M.

Mr. SPEAKER.—Motion moved:

"That the Mysore Village Offices (Amendment) Bill, 1953, be taken into consideration."

Sri M. LINGANNA (Nanjangud).—Sir, this amendment itself *in toto,* I feel, would be unnecessary for the following reasons. Government seek to amend sections 7 and 8 of the Village Offices Act. I will read section 7 (1):

"The Deputy Commissioner or Assistant Commissioner may, of his own motion or on complaint and after enquiry, fine, suspend, dismiss or remove any holder of a village office, whether in an unalienated or alienated village, for misconduct or for neglect of duty or for incapacity or for non-residence such non-residence is permitted by the Deputy Commissioner, or for any other sufficient cause."

I believe that this amendment before us is no improvment at all whatsoever over this particular provision in sub-section (1) of Section 7 because here also it is laid down that the Deputy Commissioner or an Assistant Commissioner may on his motion suspended a village officer for misconduct or for neglect of duty. Probably the fear of the Hon'ble Minister is that there is no scope for the Deputy Commissioner or the Assistant Commissioner for the suspension of a village officer for the so-called *prima facie* misconduct or neglect of duty. This provision in Section 7 (1) is very clear and when there is a complaint against a village officer, for example a shanbhog or a patel, preferred by a private individual or by anybody for that matter, then in such cases there should be an enquiry and after the enquiry the suspension order will have to come to effect. When such is the case, this

particular amendment appears to me to be unnecessary because the wording of the section is clear; it is not ambiguous as it is. I will say later on that the provision is so unambiguous and so clear that no amendment is needed. The amendment that is proposed to section 7 is superfluous and it is not at all necessary in view of the facts I have already explained. Already powers are given to the Deputy Commissioner or the Assistant Commissioner to suspend village officers in cases where they do not properly conduct themselves or where there is neglect of duty on the part of village officers. The amendment to section 8 seeks to put a restriction on the village officers if they were to enter into their respective offices. It reads as follows:

> " (1-A) Subject to the provisions of sub-section (1) no person shall be eligible for appointment to the office of Patel or Shanbhog unless—
>
> (i) he owns landed property of the value of not less than twice the annual Jamabandy of the village; or
>
> (ii) he furnishes a cash security of not less than one-fourth of the annual Jamabandy of the village."

I hold that this particular section is *ultra vires* of the Village Offices Act itself for the following reasons. Here I want to submit only one aspect of the question. We know that the appointments of the village officers, for example, a Shanbhog or Patel, are governed by personal laws. The appointment of a Patel is a hereditary right and also that of a Shanbhog and this amendment is going to put a restriction on the appointment of village officers and it is *ultra vires* of the Act itself which confers hereditary rights to village officers. If the intention of the Government is to abolish village officers, then I have no objection. In such a case, if they are willing to bring in a measure to that effect, this particular provision is not at all necessary. This particular provision being *ultra vires* of the Village Offices Act, conferred by the Village Offices Act, is rather far-fetched. If they were to confine their restriction only to gumasta Patels or gumasta Shanbhogs then, to that extent, this provision is quite in conformity with the other provisions of the Village Offices Act. If they were to retain the provision as it is, without any rider to the effect that these two amended clauses will not apply to the hereditary rights of the village officers but only to gumastha Patels and Shanbhogs, then probably this provision would be quite in keeping with the other provisions of the Village Offices Act. For these reasons, the first amendment is superfluous; the second amendment, if it is not amended properly, will be *ultra vires* of the Village Offices Act itself.

With these few words, I submit that the amendment that is proposed by the Hon'ble Minister is not at all necessary at this stage unless the Government want to abolish the structure of the village officers themselves and for the attainment of which a new clear Bill is needed.

Sri R. ANANTARAMAN (Chamarajpet).—Sir, while supporting the Bill, I would like to say a few words as to the circumstances under which this amendment Bill has been brought forward before this House. Under section 7 (1) any village officer could only be removed after a full enquiry has been held. Supposing there is an enquiry against a village officer and he is in office; it would naturally prejudice the whole case itself. It is better that the village officer is kept under suspension pending disposal of the case so that the whole case will not be prejudiced. There are many cases in which Patels and Shanbhogs in office, even though there is an enquiry against them, have so manipulated as to get themselves discharged. To obviate that, with

(SRI R. ANANTARAMAN.)

that end in view this amendment has been brought forward. The Hon'ble Minister knows that even without bringing in this amendment, the Deputy Commissioners or the Assistant Commissioners were keeping these village officers under suspension. But it was illegal; it was not correct because the Act does not contemplate suspension of any village officer pending disposal of the case. To clarify the whole position, the present Bill has been brought. If the village officer is kept under suspension during the enquiry, there will be fairness and also justice in the disposal of the case. With that view the officer is kept under suspension. After the enquiry is over, the officer may be reinstated to his office. With that end in view the present Bill is brought forward.

*Sri J. MOHAMED IMAM (Jagalur).—Sir, I have to oppose the Bill on two equitable grounds. Suspension itself is a punishment and substantive punishment and nobody should be penalised unless there is a *prima facie* case against him.

Sri KADIDAL MANJAPPA.—That is why the amendment is proposed.

Sri J. MOHAMED IMAM.—Even before a *prima facie* case is established, it is sought to give power to the Deputy Commissioner, to the Sub-Division Officer, to the Amildar and even to the Deputy Amildar to keep a village officer under suspension. It is not at all equitable. In all such cases you must observe the rules laid down in regard to the conduct of Public Servants. He is also a public servant. What is the procedure you adopt with regard to other public public servants?

Mr. SPEAKER.—I do not think it empowers the Deputy Amildar.

Sri J. MOHAMED IMAM.—On page 6 "Provided that the Amildar or Deputy Amildar........". In the case of an enquiry into the conduct of any other public servant, it is the practice to suspend him only when there is a *prima facie* case against him and when definite charges are framed against him. To keep a village officer under suspension without any enquiry and even on mere suspicion, I think, is rather a retrograde step and is not equitable. Secondly, the village officers are respectable persons holding certain status and to empower an Amildar or a Deputy Amildar or a Deputy Commissioner to take an extreme step is, I think, too dangerous.

I think, it is within our common knowledge and within the knowledge of the Revenue Minister also, that often there will be estrangement between the Amildar and village officers on various grounds. This will be giving the Amildar a big handle and a big weapon to dictate his own terms and act according to his own wishes. So I submit that this is an unfair measure and a weapon which may prove very dangerous if it is entrusted to Amildars and Deputy Amildars. What I would suggest is this. In all such cases the high competent authority must be empowered to impose this punishment. I have no objection if this power is entrusted only to the Deputy Commissioner who will act on a report sent by the Amildar. If the Amildar has any grievance against any particular village officer it is his duty to make out a *prima facie* case and make a report and the Deputy Commissioner after considering whether there is a *prima facie* case or not, will keep him under suspension. I am for giving this power to a high placed officer who will be guided by reports of subordinate officers.

Secondly, it is proposed that the village officer when entering on his duty must provide security to the extent of Jamabandi collections he has to make. This also, I think, is not a proper measure. You should not be guided by the fact that the village officer should be quite solvent. It is expected of him that he should provide this security, but it is within common knowledge of all of us that

many village officers, though holding the status, cannot provide this security. Many of them are poor, and if you insist on this measure, then I think many of the village officers will have to be sent home. So I think this provision also is quite unnecessary and if you ask every village officer to produce property which will be valued twice as much as Jamabandi collection he has to make, it will hit all village officers and it will go against the law cited by my friend Sri Linganna. On account of these two reasons, I have to oppose the Bill.

Mr. SPEAKER.—Where is it said that the Amildar or Deputy Amildar is empowered to suspend the person?

Sri J. MOHAMED IMAM.—It is stated on page 6:

> "Provided that the Amildar or Deputy Amildar may, if satisfied that there is a *prima facie* case of misconduct against any holder of a village office, place such holder under suspension till the disposal of the case or until further orders."

Sri KADIDAL MANJAPPA.—Clause 2: Amendment of section 7.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈ ಬಿಲ್ಲನ್ನು ಸಮರ್ಥನೆ ಮಾಡುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಶ್ರೀಮಾನ್ ಲಿಂಗಣ್ಣನವರು ಈ ತಿದ್ದುಪಡಿಯ ಆವಶ್ಯಕತೆಯಿಲ್ಲವೆಂದು ಹೇಳಿದರು. ಈಗಿರತಕ್ಕ ವಿಲೇಜು ಆಫೀಸರುಗಳ ಆಕ್ಟಿಗೂ ಈಗ ತಿದ್ದುಪಡಿಯಲ್ಲಿ ಸೂಚಿಸಿರುವುದಕ್ಕೂ ಇರುವ ವ್ಯತ್ಯಾಸವೇನೆಂದರೆ, ಈಗಿನ 7ನೆಯ ಸೆಕ್ಷನ್ ಪ್ರಕಾರ,

> "The Deputy Commissioner or Assistant Commissioner may on his own motion or on complaint after enquiry, fine, suspend..." and so on and so forth ಎಂದಿದೆ.

ಆದರೆ, ಇಲ್ಲಿ

> "The Deputy Commissioner or Assistant Commissioner may, if satisfied that there is a *prima facie* case of misconduct against any holder of a village office, place such holder under suspension till the disposal of the case or until further orders." ಎಂದು ಹೇಳಿದ್ದಾರೆ.

ಅಂದರೆ ಅಲ್ಲಿ enquiry ಮಾಡಿ ಆಮೇಲೆ fine ಇಲ್ಲವೇ dismiss ಮಾಡಬಹುದೆಂದಿದೆ. ಇಲ್ಲಿ *prima facie* case ಇದ್ದರೆ fine or suspend ಮಾಡುವುದಕ್ಕೆ ಅಧಿಕಾರವಿದೆಯೆಂದಿದೆ.—ಅದರಲ್ಲೂ 'till the disposal of the case' ಮೊದಲಿದ್ದುದಕ್ಕೂ ಈಗಿನದಕ್ಕೂ ಏನೂ ವ್ಯತ್ಯಾಸವಿಲ್ಲವೆಂದು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟರು ಹಾಗಲ್ಲ. ಹಾಲಿ ಬಂದಿರತಕ್ಕ ತಿದ್ದುಪಡಿಯಿಂದ ಸ್ವಲ್ಪ ಹೆಚ್ಚಿಗೆ ಅಧಿಕಾರ ಬಂದಂತಾಗುತ್ತದೆ. ಹಾಲಿ ಇರುವ ಅನುಭವ ಮತ್ತು ಕಾರ್ಯತಃ ಯಾವ ರೀತಿ ನಡೆಯುತ್ತಿದೆ ಎಂಬದನ್ನು ನೋಡಿಯೇ ಇದನ್ನು ತಂದಿದ್ದಾರೆ. ಯಾವಾಗಲೂ *prima facie* case ಇದ್ದರೇನೇ ಮಾಡುತ್ತಾರೆ. ಆದ್ದರಿಂದ ಅದನ್ನು ಸ್ಪಷ್ಟಪಡಿಸುವುದಕ್ಕಾಗಿ ಈ ತಿದ್ದುಪಡಿಯನ್ನು ತಂದಿರುವುದಾಗಿದೆ.

ಶ್ರೀಮಾನ್ ಇಮಾಂರವರು, ಇಷ್ಟೊಂದು ಅಧಿಕಾರವನ್ನು ಇಂಥ ಕೆಳಗಿನ ಅಧಿಕಾರಿಗಳಿಗೆ ಕೊಡಕೂಡದು ಎಂದು ಹೇಳಿದರು. ತಾವೀಗ ಬಡ್ಜೆಟ್ಟನ್ನು ನೋಡುವುದಾದರೆ ಕಂದಾಯ ವಸೂಲಿ ಎಷ್ಟು ಕಡಿಮೆಯಾಗಿದೆಯೆಂಬುದು ಕಾಣಬರುತ್ತದೆ. ಗ್ರಾಮಾಧಿಕಾರಿಗಳ ದಕ್ಷತೆಯ ಮೇಲೆ, ಅವರು ಸರಿಯಾಗಿ ಕೆಲಸಮಾಡುವುದರ ಮೇಲೆ ಕಂದಾಯ ವಸೂಲಿ ಚೆನ್ನಾಗಿ ಆಗುವುದು ಅಥವಾ ಆಗದಿರುವುದು ನಿಂತಿದೆಯೆಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತಿದೆ.

ಶ್ರೀ ಜೆ. ಮಹಮದ್ ಇಮಾಂ.—ಕಂದಾಯ ವಸೂಲಿ ಸರಿಯಾಗಿ ಮಾಡುವುದಿಲ್ಲವೆಂದು ಅವನನ್ನು suspend ಮಾಡಿದರೆ ಅವನ ಗತಿಯೇನು !!

ಶ್ರೀ ಡಿ. ದೇವರಾಜ ಅರಸ್.—ತಾವು ಸರ್ಕಾರ ನಡೆಸುತ್ತಿದ್ದಾಗ ಹೇಗೆ ಮಾಡುತ್ತಿದ್ದಿರೋ ಕಾಣೆ !

ಆದ್ದರಿಂದ ಈ ತೆರದ ಅಧಿಕಾರ ತುಂಬಾ ಅವಶ್ಯಕ. ಅವರು ಇನ್ನೊಂದು ಸಲಹೆಯೇನು ಮಾಡಿದರೆಂದರೆ, ಬೇಕಾದರೆ ಈ ಅಧಿಕಾರವನ್ನು ಅಸಿಸ್ಟೆಂಟ್ ಕಮಿಷನರಿಗೋ, ಡೆಪ್ಯುಟಿ ಕಮಿಷನರಿಗೋ ಕೊಡಿ, ಅಮಲ್ದಾರರಿಗೆ, ಡೆಪ್ಯುಟಿ ಅಮಲ್ದಾರರಿಗೆ ಮಾತ್ರ ಕೊಡುವುದು ಬೇಡ ಎಂದು ವಾದಿಸಿದರು. ನಾವು ಯಾವುದೇ ಒಂದು ವಿಷಯದಲ್ಲಿಯೂ ಅಧಿಕಾರವನ್ನು ವಿಕೇಂದ್ರೀಕರಿಸಿ ಎಂದು ಹೇಳುತ್ತಿರುವಾಗ ಈ ರೀತಿ ಅಮಲ್ದಾರರುಗಳಿಗೆ ಅಧಿಕಾರ ಕೊಡಬೇಡಿ ಎಂದು ಹೇಳುವುದು ಸಾಧುವಾದ ವಾದವಲ್ಲ. ಸರ್ಕಾರದ ಆಡಳಿತ ಸುಲಲಿತವಾಗಿ ನಡೆಯಬೇಕಾದರೆ ಅಧಿಕಾರ ವಿಕೇಂದ್ರೀಕರಣವಾಗಬೇಕು; ಕೆಳಗಿನ ಅಧಿಕಾರಿಗಳಿಗೆ ಹೆಚ್ಚು ಹೆಚ್ಚು ಅಧಿಕಾರಗಳನ್ನು ಕೊಟ್ಟು ಕೆಲಸ ತೆಗೆದುಕೊಳ್ಳಬೇಕು. ಆದ್ದರಿಂದ ಈಗ ಸರ್ಕಾರದ ಮೇಲೆ ಏನು ಒಂದು ದೂರಿದೆ, ಅವರು ಯಾವ ಅರ್ಜಿ ಕೊಟ್ಟರೂ ಬೇಗ ಫೈಸಲ್ ಮಾಡದೆ Red-tapism ಮಾಡಿಕೊಂಡಿರುತ್ತಾರೆಂದು ಹೇಳುತ್ತಿದ್ದಾರೆ. ಆ ದೂರುಗಳು ಬಹುಮಟ್ಟಿಗೆ ಈ ರೀತಿ ಅಧಿಕಾರ ವಿಕೇಂದ್ರೀಕರಣದಿಂದ ಕಡಮೆಯಾಗುತ್ತವೆಂದು ನನ್ನ ಸ್ವಂತ ಅಭಿಪ್ರಾಯ. ಆದ್ದರಿಂದ ಅಮಲ್ದಾರರಿಗೆ ಈ ವಿಧವಾದ ಕೆಲವು ಅಧಿಕಾರಗಳು ಇದ್ದೇ ಇರಬೇಕು. ಹಾಗಿದ್ದರೇನೇ ತಾಲ್ಲೂಕಿನ ಮಟ್ಟದಲ್ಲಿ ಕೆಲಸಗಳು ಚೆನ್ನಾಗಿ ನಡೆದಾವು. ಈ ದೃಷ್ಟಿಯಿಂದ ಈ ಎರಡು ತಿದ್ದುಪಡಿಗಳೂ ಸಾಧುವಾಗಿವೆಯೆಂದು ನಾನು ಸಮರ್ಥನೆ ಮಾಡುತ್ತೇನೆ.

*ಶ್ರೀ ಬಿ. ಎನ್. ಬೋರಣ್ಣಗೌಡ (ಬೇಲೂರು).—ಮಾನ್ಯ ಮಿತ್ರರಾದ ಶ್ರೀಮಾನ್ ಇಮಾಂಸಾಹೇಬರು ಈ ತಿದ್ದುಪಡಿಗೆ ವಿರುದ್ಧವಾಗಿ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಅಮಲ್ದಾರರಿಗೆ ಹೆಚ್ಚಿಗೆ ಅಧಿಕಾರ ಕೊಡಬೇಕೆಂದು ಈ ಬಿಲ್ಲಿನಲ್ಲಿ ಹೇಳಿದೆ, ಇದಕ್ಕೆ ಬದಲು ಡೆಪ್ಯುಟೀ ಕಮಿಷನರಿಗೆ ಈ ಅಧಿಕಾರ ಕೊಡಿರಿ ಎಂದು

(ಶ್ರೀ ಬಿ. ಎಲ್. ಬೋರಣ್ಣಗೌಡ)

ಅವರು ವಾದಿಸಿದರು. ಗ್ರಾಮಾಧಿಕಾರಿಗಳಿಗೆ immediate Superior Officer ಆಗಿರುವವರು ಅಮಲ್ದಾರರೇ ಹೊರತು ಡೆಪ್ಯುಟಿ ಕಮಿಷನರಲ್ಲ. ಯಾವುದಾದರೂ ತಪ್ಪಿಗೆ ಅಮಲ್ದಾರರು ಶಿಕ್ಷೆ ಕೊಟ್ಟರೆ, ಅವರ ಮೇಲೆ ಸಬ್‌ಡಿವಿಜನ್ ಆಫೀಸರಿಗೆ ಹೋಗಿ, ಅಲ್ಲಿಂದ ಡೆಪ್ಯುಟಿ ಕಮಿಷನರಿಗೆ, ಮುಂದೆ ಮಂತ್ರಿಗಳ ವರೆಗೂ ಹೋಗಿರುವ ನಿದರ್ಶನಗಳಿವೆ. ಆದ್ದರಿಂದ ಸಾಮಾನ್ಯ ತಪ್ಪುಗಳಿಗೆಲ್ಲಾ ಮಂತ್ರಿಗಳವರೆಗೂ ಹೋಗುವುದಕ್ಕೆ ಅವಕಾಶವಿರಬೇಕೆಂಬದನ್ನು ಯಾರೂ ಒಪ್ಪಲಾರರು. ಅದೇ ಕಾರಣದಿಂದ ಈ ಅಧಿಕಾರವನ್ನು ಡೆಪ್ಯುಟಿ ಕಮಿಷನರಿಗೆ ಕೊಡುವುದನ್ನು ನಾನು ಒಪ್ಪುವುದಿಲ್ಲ.

ಇನ್ನು ವಸೂಲಿ ಸರಿಯಾಗಿ ಆಗದಿರುವುದಕ್ಕೆ ತಪ್ಪು ಲೆಕ್ಕಗಳನ್ನು ಶಾನುಭೋಗರುಗಳು ಕೊಡುವುದೂ ಒಂದು ಕಾರಣವಾಗಿದೆ. ಶಾನುಭೋಗರು ಪಟೇಲರುಗಳನೇಕರು ವಸೂಲಾದ ದುಡ್ಡನ್ನು ಮಾರ್ಚಿಯಲ್ಲಿ ಮಾಡಿದ್ದನ್ನು ಏಪ್ರಿಲ್‌ನಲ್ಲಿಯೋ, ಏಪ್ರಿಲ್‌ನಲ್ಲಿ ಮಾಡಿದ್ದನ್ನು ಮುಂದಿನ ತಿಂಗಳಿನಲ್ಲಿಯೋ ನಿಧಾನವಾಡಿ ಕಟ್ಟುವುದು ಸ್ವಭಾವವಾಗಿ ಬಿಟ್ಟಿದೆ. ಆದ್ದರಿಂದ ಅಂಥವರ ಮೇಲೆ ತಪ್ಪಿಗೆ ಶಿಕ್ಷೆಮಾಡುವುದಕ್ಕೆ ಅಮಲ್ದಾರರಿಗೆ ಅಧಿಕಾರವಿದ್ದರೆ ಒಳ್ಳೆಯದು. ಅವರ ಹುಕುಮಿನ ಮೇಲೆ ಸಬ್‌ಡಿವಿಜನ್ ಆಫೀಸರಿಗೋ ಅಥವಾ ಡೆಪ್ಯುಟೀ ಕಮಿಷನರಿಗೋ ಅಪೀಲು ಹೋಗುವುದಕ್ಕೆ ಅವಕಾಶವಿದೆ. ಪಟೇಲ್ ಶ್ಯಾನುಭೋಗರು ನಿರ್ಗತಿಕರು ಬಡವರು ಎಂದು ಇವರು ಸಾಹೇಬರು ಹೇಳಿದರು. ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿಕೊಂಡು ಮಂತ್ರಿಗಳವರೆಗೂ ಕೆಲವು ಕೇಸುಗಳನ್ನು ತಂದಿರುವ ನಿದರ್ಶನಗಳುಂಟು. ಆದ್ದರಿಂದ ಆ ವಾದದ ಮೇಲೆ ಅವರಿಗೆ ಸೆಕ್ಯೂರಿಟಿಗಳನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಲಾರೆ. ಅಲ್ಲದೆ ಪಟೇಲ್ ಶ್ಯಾನುಭೋಗರುಗಳು ಊರಿನಲ್ಲಿ ಒಳ್ಳೆಯ ಗೌರವಸ್ಥರಾಗಿರಬೇಕು. ಅವರ ಗೌರವಕ್ಕೆ ತಕ್ಕಂತೆ ಕೆಲವು ಜಮೀನುಗಳನ್ನು ಇಟ್ಟುಕೊಂಡಿರಬೇಕೆಂದು ನಿರೀಕ್ಷಿಸುವುದೇನೂ ಹೆಚ್ಚಲ್ಲ. ಅಲ್ಲದೆ ನಾವು ಅವರಿಗೆ ವಹಿಸಿರತಕ್ಕ ಜವಾಬ್ದಾರಿ ಏನಿದೆ, ಅದಕ್ಕೆ ತಕ್ಕಷ್ಟು ಅವರಿಗೆ ಅರ್ಹತೆಯಿದೆಯೇ ಇಲ್ಲವೇ ಎಂಬುದನ್ನು ನೋಡಬೇಕಾದ್ದೂ ಸೂಕ್ತ. ಈ ದೃಷ್ಟಿಯಿಂದ ಅವರು ವಸೂಲುಮಾಡತಕ್ಕ ಜಮಾಬಂದಿಯ ಎರಡರಷ್ಟು ಆಸ್ತಿಯಿರಬೇಕೆಂಬುದು ಅವಶ್ಯಕ. ಆದ್ದರಿಂದ ಈ ಮಸೂದೆ ಸಾಧುವಾಗಿದೆಯೆಂದು ಹೇಳಿ ನಾನು ಸಮರ್ಥಿಸುತ್ತೇನೆ.

*ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ನಾನು ಈ ತಿದ್ದುಪಡಿ ಮಸೂದೆಯನ್ನು ಸಮರ್ಥಿಸುತ್ತೇನೆ. ಇದರಮೇಲೆ ಮಾತನಾಡಿದ ಶ್ರೀಮಾನ್ ದೇವರಾಜ ಅರಸ್‌ನವರು ಸಮಂಜಸವಾದ ಕಾರಣಗಳನ್ನು ಹೇಳಿ ಇದನ್ನು ಸಮರ್ಥಿಸಿದ್ದಾರೆ. ಗ್ರಾಮಾಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಮೊದಲು ವಿಚಾರಣೆಯೇ ಆಗದೆ ಮಾಡಕೂಡದೆಂಬ ಅರ್ಥ ಬರುವ ರೀತಿಯಲ್ಲಿ ಕಾನೂನಿತ್ತು; ವಿಚಾರಣೆಯಾದಮೇಲೆಯೇ ಮಾಡಬೇಕೆಂದು ಹೇಳಿತ್ತು. ಆದ್ದರಿಂದ ವಿಚಾರಣೆಯಾಗದೆ ಇದ್ದರೂ, *Prima facie* ಕೇಸು ಅವರ ಮೇಲಿದ್ದರೆ, ಉದಾಹರಣೆಗೆ ಏನಾದರೂ misconduct ನಡೆದಿದೆಯೆಂದು ತಿಳಿದುಬಂದಿದ್ದರೆ ಅವನನ್ನು ಸಸ್ಪೆಂಡ್ ಮಾಡಬಹುದೆಂದು ಇಲ್ಲಿ ಹೇಳಿರುವುದು ಸೂಕ್ತ ಹಾಗೂ ಅತ್ಯಗತ್ಯವಾಗಿದೆ.

ಆಮೇಲೆ ಶ್ಯಾನುಭೋಗ ಪಟೇಲರಿಗೆ ಸಾಕಾದಷ್ಟು ಆಸ್ತಿ ಇರಬೇಕೆಂದು ಸೆಕ್ಯೂರಿಟಿ ದೃಷ್ಟಿಯಿಂದ ಹೇಳಿದ್ದಾರೆ. ಇದೂ ಬಹಳ ಮುಖ್ಯವಾದುದು. ಈ ಸೂಚನೆಯನ್ನು ತಂದಿರುವುದಕ್ಕಾಗಿ ನಾನು ಸರ್ಕಾರದವರನ್ನು ನಿಜವಾಗಿಯೂ ಮೆಚ್ಚುತ್ತೇನೆ. ಕಾರಣವೇನೆಂದರೆ, ಈಗ ತಾವು ಸಂಸ್ಥಾನದಲ್ಲಿರತಕ್ಕ ಅನೇಕ ಗ್ರಾಮಾಧಿಕಾರಿಗಳ ಆಡಳಿತವನ್ನು ನೋಡಿದರೆ, ಬಹುಭಾಗದ ಗ್ರಾಮಾಂತರಗಳಲ್ಲಿ ಅವರುಗಳು ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂಬುದು ಗೊತ್ತಾಗುತ್ತದೆ. ಇದಕ್ಕೆ ಕಳೆದ ಹತ್ತು ವರ್ಷಗಳಿಂದಲೂ ಸಹ ಅನೇಕ ನಿದರ್ಶನಗಳು ಈ ಶಾಸನ ಸಭೆಗಳ ಮುಂದೆ ಬಂದಿವೆ. ಇದಕ್ಕೆ ಸಿದ್ಧಪ್ರಸಿದ್ಧ ಯಾವುದೆಂದರೆ, ಇದು. ವಸೂಲಿ ಕಾಲ ಬಂದಾಗ ವಸೂಲಾದ ಮೊಬಲಗನ್ನು ದಸ್ತು ಮಾಡಿ ಸರ್ಕಾರಕ್ಕೆ ಬರಬೇಕಾದ ಹಣವನ್ನು ಅನೇಕ ಸಂದರ್ಭಗಳಲ್ಲಿ ತಪ್ಪಿಹೋಗುವಂತೆ ಮಾಡಿದ್ದಾರೆ. ದಸ್ತು ಮಾಡಿದರೆಂದು ಅವರ ಆಸ್ತಿಪಾಸ್ತಿಗಳನ್ನು ಹಿಡಿದು ವಸೂಲುಮಾಡುವುದಕ್ಕೆ ಹೊರಟರೆ ಸಾಕಷ್ಟು ಆಸ್ತಿಯೇ ಎಷ್ಟೋವೇಳೆ ಇಲ್ಲದೆ ಹೋಗಿರುವುದು ಕಂಡುಬಂದಿದೆ. ಇದರಿಂದಾಗಿ ಸರ್ಕಾರಕ್ಕೆ ಎಷ್ಟೋ ಹಣ ನಷ್ಟವಾಗಿದೆ. ಈ ದೃಷ್ಟಿಯಿಂದ ಗ್ರಾಮದ ಜಮಾ ಬಂದಿಯ ಎರಡರಷ್ಟು ಆಸ್ತಿಯಿರಬೇಕೆಂದು ಹೇಳಿದ್ದೀರಿ; ಪ್ರಾಯಶಃ ಮೂರರಷ್ಟಿರಬೇಕೆಂದು ಹೇಳಿದ್ದರೂ ತಪ್ಪಾಗಲಾರದೆಂದು ನನಗೆ ತೋರುತ್ತದೆ. ಆದ್ದರಿಂದ ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ.

ಶ್ರೀ ಜಿ. ಬಸಪ್ಪ (ಹೊಸದುರ್ಗ).—ಗುಮಾಸ್ತರುಗಳನ್ನಿಟ್ಟುಕೊಂಡು ಕೆಲಸ ನಡೆಸುತ್ತಾ ಇರುವ ಗ್ರಾಮಾಧಿಕಾರಿಗಳಿಗೂ ಇದು ಅನ್ವಯಿಸುತ್ತದೆಯೇ?

Sri KADIDAL MANJAPPA.—I will answer you later.

ಶ್ರೀ ಎಂ. ರಾಜಶೇಖರಮೂರ್ತಿ (ಎಳಂದೂರು).—On a point of information, Sir; ಪಟೇಲ್ ಶ್ಯಾನುಭೋಗಿಕೆ ವಂಶಪಾರಂಪರ್ಯವಾಗಿ ಬರತಕ್ಕಂಥ ಹಕ್ಕು. ಈಗ ನೀವು ಈ ಮಸೂದೆಯ ಪ್ರಕಾರ ಕೆಲವು ಅರ್ಹತೆಗಳು ಅವರುಗಳಿಗಿರಬೇಕೆಂದು ಗೊತ್ತುಮಾಡಿದ್ದೀರಿ. ಅದರಂತೆ ಒಬ್ಬಾನೊಬ್ಬನಿಗೆ ಸಾಕದಷ್ಟು ಆಸ್ತಿ ಮತ್ತು cash security ಇದ್ದು, ಆತನು ಗತಿಸಿದ ಮೇಲೆ ಮಗನಿಗೆ ಆ ಹಕ್ಕು ಬಂದಾಗ ಅವನಲ್ಲಿ ನೀವು ಹೇಳಿದ property qualification ಹಾಗೂ cash security ಇಲ್ಲದೆ ಹೋದರೆ, ಅಲ್ಲಿಗೆ Hereditary Right ಹೊರಟುಹೋಗುತ್ತದೆಯೇ ಅಥವಾ ಉಳಿಯುತ್ತದೆಯೇ?

2-30 P.M.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಈ 1953ನೆಯ ಇಸವಿಯ ವಿಲೇಜ್ ಆಫೀಸರ್ಸ್ ಅಮೆಂಡ್‌ಮೆಂಟ್ ಬಿಲ್ಲನ್ನು ಮುಂದೆ ಕೊಡುವ ಕಾರಣಗಳಿಗಾಗಿ ನಾನು ವಿರೋಧಿಸುತ್ತೇನೆ. ಈಗಾಗಲೇ ಚರ್ಚೆಯಾಗಿರುವಹಾಗೆ, ಶ್ಯಾನುಭೋಗರು ಮತ್ತು ಪಟೇಲರುಗಳ ಸ್ಥಾನಮಾನ ಇನ್ನೂ ನಿರ್ದಿಷ್ಟವಾಗಿಲ್ಲ. ಅವರು ಒಂದುಕಡೆ ಸರ್ಕಾರದ ಅಧಿಕಾರಿಗಳಾಗಿರಬೇಕು, ಎಂದರೆ ಸರ್ಕಾರದ ನೌಕರ ಷಾಹಿಯಲ್ಲಿ ಒಬ್ಬರಾಗಿರಬೇಕೆಂದು ಒತ್ತಾಯಪಡಿಸುವ ಪ್ರಯತ್ನ ಮಾಡುತ್ತೀರಿ; ಇನ್ನೊಂದು ಕಡೆ, ಅವರನ್ನು ಈ ಸರ್ಕಾರದ ಯಂತ್ರದಲ್ಲಿ ಪೂರ್ಣವಾಗಿ ಮಿಳನ ಮಾಡಬೇಕು, ಸೇರಿಸಿಕೊಳ್ಳಬೇಕು ಎಂಬ ವಾದ

ಬಂದಾಗ, ಹಣಕಾಸಿನ ದೃಷ್ಟಿಯಿಂದ ಅವರು ಹೊರಗಿರುವುದೇ ಈಗಿನ ಪರಿಸ್ಥಿತಿಯಲ್ಲಿ ಒಳ್ಳೆಯದೆಂದು ಯೋಚನೆಮಾಡುತ್ತೀರಿ. ಅಲ್ಲದೆ, ಅವರಿಗೆ ಶಿಕ್ಷೆ ಕೊಡುವುದಕ್ಕೆ ಈಗ ಕಾನೂನೇನೂ ಇಲ್ಲವೆಂದೇನೂ ಅಲ್ಲ. ಆದರೆ ಇದರಲ್ಲಿ "after enquiry" ಎಂದಿದೆ; ಅಂದರೆ, ವಿಚಾರಣೆಯಾದಮೇಲೆ ಶಿಕ್ಷೆ ಮಾಡಬಹುದು; ಅಮಲ್ದಾರರಿಗಾಗಲಿ ಡೆಪ್ಯುಟಿ ಅಮಲ್ದಾರರಿಗಾಗಲಿ ಈಗ ಅಧಿಕಾರವಿಲ್ಲವೇಯಿರುವುದರಿಂದ ಅಧಿಕಾರ ಕೊಡುವುದು ಈ ಮಸೂದೆಯ ಉದ್ದೇಶವೆಂದು ಹೇಳಲಾಗಿದೆ. ಇದರ ಜೊತೆಗೆ, ಈ ಗ್ರಾಮಾಧಿಕಾರಿಗಳಿಗೆ ಆಸ್ತಿ ಇರಬೇಕು, ಅವರು ಹಣ ಕಟ್ಟಬೇಕು ಎಂದು ಇದರಲ್ಲಿ ವಿಧಾಯಕಮಾಡಿದೆ. ನಾನು ಮೊದಲೇ ಹೇಳಿದಹಾಗೆ, ಅವರಿಗೆ ವಂಶ ಪಾರಂಪರ್ಯವಾಗಿ ಬಂದ ಹಕ್ಕು ಏನಿದೆಯೋ ಅದು ಇರುವಾಗ, ಶ್ರೀಮಾನ್ ರಾಜಶೇಖರ ಮೂರ್ತಿಯವರು ಹೇಳಿದಂತೆ, ಮುಗನ ಕಾಲಕ್ಕೆ ಅವನ ಆಸ್ತಿಪಾಸ್ತಿಯನ್ನು ಕಳೆದುಕೊಂಡಿದ್ದರೆ, ಅವನು ಪಟೇಲಿಯನ್ನು ಕಳೆದುಕೊಳ್ಳುವ ಸಂದರ್ಭ ಬರುತ್ತದೆ. ಡೆಪ್ಯುಟಿ ಕಮೀಷನರು ಇಷ್ಟಪಟ್ಟರೆ ಈ ಎರಡು ಷರತುಗಳೂ ಇಲ್ಲದೆ ಕೆಲಸ ಕೊಡಬಹುದೆಂದೂ ಈ ಮಸೂದೆಯಲ್ಲಿ ಮುಂದೆ ಹೇಳಿದೆ. ಎಂದರೆ, he will be at the discretion and mercy of that officer. ಅವರು ಹೀಗೆ ಕೊಡುವುದಕ್ಕೆ ಇಷ್ಟಪಡಬಹುದು ಅಥವಾ ಪಡದೇಯಿರಬಹುದು. ಆದುದರಿಂದ ಅವರ ವಿವೇಚನೆಗೆ ಬಿಡುವುದು ಅಷ್ಟು ಸೂಕ್ತವಲ್ಲ. ಇದರಿಂದ ಹಟ್ಟು ತೊಂದರೆಗಳುಂಟಾಗುತ್ತವೆ. ಈ ಗ್ರಾಮ ನೌಕರರು ವಸೂಲು ಮಾಡಿದ ಕಂದಾಯಗಳನ್ನು ತಿಂದುಹಾಕುತ್ತಾರೆಂದು ಶ್ರೀಮಾನ್ ಬೋರಣ್ಣಗೌಡರು ಹೇಳಿದರು. ಅವರು ಬಹುಶಃ ಒಳ್ಳೆಯ ಉದ್ದೇಶದಿಂದಲೇ ಹೇಳಿರಬಹುದು. ಆದರೆ, ಇವರ ಸ್ಥಾನಮಾನವನ್ನು ಸರಿಯಾಗಿ ಗೊತ್ತುಮಾಡದೆ, ಒಂದು ಕಡೆ ಇವರು ವಂಶಪಾರಂಪರ್ಯವಾಗಿ ಬಂದಿರತಕ್ಕವರು, ಖಾಸಗೀ ಜನರು ಎಂದು ಹೇಳಿ ಹೊರಗೆ ಬಿಡುತ್ತಾರೆ; ಇನ್ನೊಂದು ಕಡೆ, ನಿಮಗೆ ಸರ್ಕಾರದಲ್ಲಿ ಸಂಬಂಧವಿರುವುದರಿಂದ ಚುನಾವಣೆ ಇತ್ಯಾದಿಗಳಿಗೆ ಬರಬಾರದೆಂದು ಅಡ್ಡಿಪಡಿಸುತ್ತಾರೆ. ಒಂದು ವೇಳೆ ಅವರನ್ನು ಸಂಪೂರ್ಣವಾಗಿ ಸರ್ಕಾರಿ ನೌಕರರನ್ನಾಗಿ ಮಾಡಬೇಕೆಂದರೆ ವಂಶಪಾರಂಪರ್ಯವಾಗಿ ಬರುವುದನ್ನು ರದ್ದುಪಡಿಸಿ ಸರ್ಕಾರದ ಯಂತ್ರದಲ್ಲಿ ಅವರಿಗೆ ನಿರ್ದಿಷ್ಟವಾದ ಸ್ಥಾನಮಾನ ಕೊಟ್ಟು, ವೇತನಕೊಟ್ಟು, ಒಂದು ಮಸೂದೆಯನ್ನು ತಂದರೆ ಅದನ್ನು ನಾವು ಪರಿಶೀಲನೆ ಮಾಡಬಹುದು. ಹಾಗಿಲ್ಲದೆ ಅವರಿಗೆ ಈಗಿರತಕ್ಕ ಸ್ಥಾನಮಾನ ಹಾಗೆಯೇ ಇದ್ದು ಅವರನ್ನು ಸಸ್‌ಪೆಂಡ್ ಮಾಡತಕ್ಕ ಅಧಿಕಾರ ಕೊಟ್ಟು ಅವರ ಮೇಲೆ ದೂರುಬಂದ ತಕ್ಷಣ ಅವರನ್ನು ಸಸ್‌ಪೆಂಡ್ ಮಾಡಬಹುದೆಂದರೆ ಹೇಗೆ? ಈ ಹೊತ್ತು ಇವರಲ್ಲಿ ಅನೇಕರು ಒಂದು ಗೌರವಕ್ಕಾಗಿ ಆ ಸ್ಥಾನಗಳನ್ನು ಕಾಪಾಡಿಕೊಂಡುಬಂದಿದ್ದಾರೆ. ಅಂಥವರನ್ನು ಯಾವುದಾದರೂ ಕಾರಣ ಕೊಟ್ಟು ಸಸ್‌ಪೆಂಡ್ ಮಾಡಬಹುದು. ಯಾವುದಾದರೂ ಕೇಸಿನ ಸಂಬಂಧದಲ್ಲಿ ಹೀಗೆ ಮಾಡಿ, ಆಮೇಲೆ ಅವರು 'ಅಕ್ವಿಟ್' ಆದರೂ ಅವರ ಮಾನಕ್ಕೆ ಚ್ಯುತಿ ತರುವಂತೆ ಮಾಡಬಹುದು. ಈ ಒಂದು ಕಷ್ಟ ಕೂಡ ಈ ಮಸೂದೆಯಿಂದ ಉದ್ಭವಿಸುತ್ತದೆ. ಇದರ ಜೊತೆಗೆ ಒಂದು ಆಸ್ತಿಯ ಅರ್ಹತೆಯನ್ನು ಕೇಳಿರುವುದು ಬಹಳ ನಿಷ್ಕರುಣೆಯಿಂದ ಮಾಡಿರತಕ್ಕದ್ದು ಎನಿಸುತ್ತದೆ. ನಿಜವಾಗಿ ಹಣ ದುರುಪಯೋಗವಾಗಿದೆಯೆಂದು ದೂರುಗಳು ಬಂದು ತನಿಖೆ ಮಾಡುವುದುಂಟು. ಈಗಲೂ ಕೂಡ ಯಾರಾದರೂ ಸರ್ಕಾರಿ ಹಣ ದುರುಪಯೋಗಮಾಡಿದರೆ, ಹಣ ತಿಂದರೆ, ಅವರಿಗೆ ಶಿಕ್ಷೆ ಮಾಡುವುದಕ್ಕೆ ಸಾಕಷ್ಟು ಅವಕಾಶವಿದೆ. ಇದಕ್ಕೆ ಹೊಸದಾಗಿ ಕಾನೂನು ಮಾಡಬೇಕಾಗಿಲ್ಲ. ಎಷ್ಟೋವೇಳೆ ಮಂತ್ರಿಪದವಿಯಲ್ಲಿರುವವರೂ ಇತರ ದೊಡ್ಡ ದೊಡ್ಡ ಹುದ್ದೆಯನ್ನಿಟ್ಟುಕೊಂಡಿರುವವರೂ ಸರ್ಕಾರದ ಪರವಾಗಿ ಎಷ್ಟೋ ದೊಡ್ಡ ದೊಡ್ಡ ಹಣದ ವ್ಯವಹಾರ ಮಾಡಬೇಕಾಗುತ್ತದೆ, ಅಂತಹ ಅಧಿಕಾರಿಗಳಿಗೆ ಈ ರೀತಿ ಯಾವ ಯಾವ ಕಾನೂನೂ ಇರುವುದಿಲ್ಲ. ಹೀಗಿರುವಾಗ ಪಟೇಲ್, ಶ್ಯಾನುಭೋಗರಿಗೆ landed property of the value of not less than twice the annual jamabandy of the village ಇರಬೇಕೆಂದರೆ, ಎಷ್ಟು ಜನ ಪಟೇಲ್ ಶ್ಯಾನುಭೋಗರುಗಳು ಈ ಷರತ್ತನ್ನು ಈಡೇರಿಸುವುದಕ್ಕೆ ಶಕ್ತರಾಗಿದ್ದಾರೆ ಎಂಬುದನ್ನು ನೋಡಬೇಕು. ಅಥವಾ 'a cash security of not less than one-fourth of the annual jamabandy of the village' ಕೊಡಬೇಕೆಂದಿದೆ. ಪಾಪ! ಎಷ್ಟೋ ಜನರಿಗೆ ಬರುವ ಪೋಟಿಗೆಯನ್ನು ತೆಗೆದುಕೊಂಡು ಜೀವನ ಮಾಡುವುದೇ ಕಷ್ಟವಾಗಿದೆ. ಹೀಗಾಗಿರುವಾಗ ಇಂಥ ಒಂದು ಷರತ್ತು ಹಾಕಿರುವುದನ್ನು ನೋಡಿದರೆ, ಆಶ್ಚರ್ಯವಾಗುತ್ತದೆ! ಅನೇಕ ಪಟೇಲ್ ಶ್ಯಾನುಭೋಗರು ಒಳ್ಳೆಯವರು. ಅವರ ಜೀವಮಾನದಲ್ಲೇ ಒಂದು ಕಾಸು ಸರ್ಕಾರಿ ಹಣ ತಿಂದಿರುವುದಿಲ್ಲ. ಆದರೂ ಬಡವರಾಗಿ ಜೀವನ ಮಾಡುವುದು ಕಷ್ಟವಾಗಿರುತ್ತದೆ. ಆದುದರಿಂದ ಈ ಷರತ್ತು ಹಾಕಿರುವುದರಿಂದ ಅನೇಕ ಗೌರವಸ್ಥರೂ, ಹಣ ಕೊಡಲಾರದವರೂ ಬಹಳ ಕಷ್ಟಕ್ಕೊಳಗಾಗಿ, ಅವರಿಗೆ ಇದೊಂದು ದೊಡ್ಡ ಹೊರೆಯಾಗಿ ಇದರಿಂದ ಅವರು ತಮ್ಮ ಹಕ್ಕುಗಳನ್ನು ಕಳೆದುಕೊಳ್ಳಬೇಕಾಗುತ್ತದೆಂಬ ಶಂಕೆ ನನಗಿದೆ. ಒಟ್ಟಿನಲ್ಲಿ, ವಂಶಪಾರಂಪರ್ಯವಾದ ಹಕ್ಕುಗಳನ್ನು ರೂಢಿಸಿಕೊಂಡು ಬರುವಹಾಗಿದ್ದರೆ ಹಾಗೆ ಮಾಡಬಹುದು. ಅಥವಾ ಇದನ್ನು ರದ್ದುಮಾಡಬೇಕಾದರೆ, ಧೈರ್ಯವಾಗಿ ಮುಂದೆ ಹೆಜ್ಜೆಯಿಟ್ಟು ಸರ್ಕಾರಿ ಯಂತ್ರದಲ್ಲಿ ಇವರಿಗೆ ನಿರ್ದಿಷ್ಟ ಸ್ಥಾನಮಾನ ಕೊಟ್ಟು ಸೇರಿಸಿಕೊಳ್ಳಬಹುದು. ರೆವೆನ್ಯೂ ಹಣ ಪೋಲಾಗದೇಯಿರುವ ಹಾಗೆ ತಾವೇನೋ ಮುತುವರ್ಜಿಯಿಂದ ಅವರು ಕೆಲಸಮಾಡಬೇಕೆಂದು ನಿರೀಕ್ಷಿಸಿ ಈ ಕಾನೂನನ್ನು ತಂದಿದ್ದೀರಿ. ಆದರೆ ಆ ಉದ್ದೇಶ ಈಡೇರುವುದಿಲ್ಲ. ಇಷ್ಟು ಹೇಳಿ ಈ ಮಸೂದೆಯನ್ನು ವಿರೋಧಿಸುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಈ ತಿದ್ದುಪಡಿ ಮಸೂದೆ ಬಹಳ ಅವಶ್ಯಕವಾದುದೂ ಸಾಧುವಾದುದೂ ಆಗಿರುತ್ತದೆ. ನನ್ನ ಮಿತ್ರರು ಮಾತನಾಡಿದುದರಲ್ಲಿ ಎರಡು ಆಕ್ಷೇಪಣೆಗಳನ್ನೆತ್ತಿದ್ದಾರೆ. ಸೆಕ್ಷನ್ 7ರ ತಿದ್ದುಪಡಿಯ ವಿಷಯದಲ್ಲಿ ನನ್ನ ಮಿತ್ರರಾದ ಶ್ರೀಮಾನ್ ಲಿಂಗಣ್ಣನವರು, ಇದು superfluous ಆಗುತ್ತದೆಂಬ ವಾದವನ್ನೆತ್ತಿದ್ದಾರೆ. ಹಾಗಾಗುವುದಿಲ್ಲವೆಂದು ಅವರಿಗೆ ಸಮಜಾಯಿಷಿ ಹೇಳಬೇಕಾಗಿದೆ. ನನ್ನ ಮಿತ್ರರಾದ ಶ್ರೀಮಾನ್ ದೇವರಾಜ ಅರಸಿನವರು ಹೇಳಿದಹಾಗೆ, ಒಬ್ಬರು ಡೆಪ್ಯುಟಿ ಕಮಿಷನರಿಗೆ ಒಬ್ಬ ಗ್ರಾಮಾಧಿಕಾರಿ ತಪ್ಪು ಮಾಡಿದ್ದಾನೆ, ಯಾವುದಾದರೂ ಹಣ ತಿಂದಿದ್ದಾನೆ, ಅಥವಾ ಯಾವುದಾದರೂ ಕ್ರಿಮಿನಲ್ ತಕ್ಸೀರು ಮಾಡಿದ್ದಾನೆ, ಖೂನಿ ಕೇಸಿನಲ್ಲಿ ಸಿಕ್ಕಿಕೊಂಡಿದ್ದಾನೆ ಎಂದು ಮನಸ್ಸಿಗೆ ಧೃಢಪಟ್ಟಪಕ್ಷದಲ್ಲಿ ಅಂಥ ಪಟೇಲ ಅಥವಾ ಶ್ಯಾನುಭೋಗನನ್ನು ಸಸ್‌ಪೆಂಡ್ ಮಾಡಬಹುದೆಂಬುದು ಇದರ

(ಶ್ರೀ ಜಿ. ಎ. ತಿಮ್ಮಪ್ಪ ಗೌಡ.)

ಉದ್ದೇಶ. ಇದಕ್ಕೆ ಮುಂಚೆ ವಿಚಾರಣೆ ಆದಮೇಲೆ ಅತನು ತಪ್ಪಿತಸ್ಥನೆಂದು ಕಂಡುಬಂದರೆ ಆಗ ಸಸ್ ಪೆಂಡ್ ಮಾಡುವುದಕ್ಕೆ ಅವಕಾಶವಿತ್ತು. ಇದನ್ನು ತಪ್ಪಿಸುವುದಕ್ಕೆ ಕಾರಣವೇನೆಂದರೆ, ಅದು ಮಿತ್ರರಿಗೆ ಗೊತ್ತಿದೆ; ಒಂದು ಗ್ರಾಮದಲ್ಲಿ ಒಂದು ತಕ್ಸೀರು ನಡೆದರೆ, ಒಂದು ತಪ್ಪುಮಾಡಿದರೆ, ಪಟೇಲರು, ಶಾನುಭೋಗರು ಆ ಗ್ರಾಮದಲ್ಲಿ ಎಷ್ಟು ಪ್ರಭಾವಶಾಲಿಗಳಾಗಿರುತ್ತಾರೆ, ಎಷ್ಟುಮಟ್ಟಿಗೆ ಅಲ್ಲಿನ ಜನರ ಮೇಲೆ ತಮ್ಮ ಪ್ರಭಾವವನ್ನು ಬೀರಬಲ್ಲರು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಎಕ್ಸ್‌ವೈರಿ ಆಗುವುದಕ್ಕೆ ಅವಕಾಶ ಕೊಟ್ಟರೆ ಯಾವ ಕೇಸಿಗೆ, ರುಜುವಾತು ಬೇಕಾಗಿರುತ್ತದೆಯೋ ಆ ರುಜುವಾತು ದೊರೆಯದಂತೆ ಮಾಡುವ ಶಕ್ತಿ ಅವರಿಗಿರುತ್ತದೆ. ಆಗ ಸರಿಯಾದ ರುಜುವಾತಿಲ್ಲದೆ ನ್ಯಾಯ ದೊರೆಯಬೇಕಾದರೆ ಕಷ್ಟವಾಗುತ್ತದೆ. ಸರ್ಕಾರಿ ನೌಕರರನ್ನುಕೂಡ, ಅವರು ಕ್ರಿಮಿನಲ್ ಕೇಸ್‌ನಲ್ಲಿ involve ಆದರೆ, ಸಸ್‌ಪೆನ್‌ಷನ್‌ನಲ್ಲಿಡಬೇಕಾಗುತ್ತದೆ. ಯಾರಾದರೂ ಮಂತ್ರಿಗಳ ಮೇಲೆ ಊಹಾಪೋಹಗಳು ಬಂದರೆ, ಪತ್ರಿಕೆಗಳಲ್ಲಿ ಆರೋಪಣೆಗಳು ಬಂದರೆ, ಅವರನ್ನು ಕೂಡ ಸಸ್‌ಪೆನ್‌ಷನ್‌ನಲ್ಲಿಡಬೇಕೆಂದೂ ವಿಚಾರಣೆ ನಡೆಸಬೇಕೆಂದೂ ನಮ್ಮ ಮಿತ್ರರು ಹೇಳುತ್ತಾರೆ. ಹೀಗಿರುವಾಗ ಈ ಕಾನೂನಿನಲ್ಲಿ ನ್ಯಾಯವಾದ ವಿಚಾರಕ್ಕೆ ಆಕ್ಷೇಪಣೆ ಎತ್ತಿರುವುದು ನ್ಯಾಯವಲ್ಲ.

ಇನ್ನೊಂದು ವಿಚಾರ. ವಂಶಪಾರಂಪರ್ಯವಾದ ಹಕ್ಕಿಗೆ ಧಕ್ಕೆಬರುತ್ತದೆ, ಅದು ಕಾನೂನಿಗೆ ವಿರೋಧವಾಗಿದೆ ಎಂಬ ವಿಚಾರವನ್ನು ಕೆಲವು ಸ್ನೇಹಿತರು ಹೇಳಿದರು. ಈಗ ಯಾವ ಒಂದು ವಂಶಪಾರಂಪರ್ಯವಾದ ಹಕ್ಕಿದೆಯೋ ಅದಕ್ಕೆ ಇದರಿಂದ ಚ್ಯುತಿಬರುವುದಿಲ್ಲವೆಂಬುದು ಕಾನೂನನ್ನು ಸರಿಯಾಗಿ ಓದಿದರೆ ಗೊತ್ತಾಗುತ್ತದೆ. ಇನ್ನು ಪಟೇಲರು ವಿದ್ಯಾವಂತರಾಗಿರಬೇಕು, ಶಾನುಭೋಗರು ವಿದ್ಯಾವಂತರಾಗಿರಬೇಕು, ಆ ಊರಿನಲ್ಲೇ ವಾಸವಾಗಿರಬೇಕು, ಮುಂತಾದ ವಿಷಯಗಳಿವೆ. ಈ ಅರ್ಹತೆಗಳಿದ್ದ ಪಕ್ಷದಲ್ಲಿ ಮಾತ್ರ ವಂಶಪಾರಂಪರ್ಯವಾಗಿರುತ್ತದೆ, ಈ ಕಾನೂನು ಅನ್ವಯವಾಗುತ್ತದೆ. ಆ ವಂಶದಲ್ಲಿ ಹುಟ್ಟಿದಮಾತ್ರಕ್ಕೇ ಅವನು ಹುಚ್ಚನಾಗಿದ್ದರೂ, ಅವಿದ್ಯಾವಂತನಾಗಿದ್ದರೂ ಅವನನ್ನು ಆ ಸ್ಥಾನದಲ್ಲಿಡಬೇಕೆಂದೇನೂ ಇಲ್ಲ. ಆದುದರಿಂದ ಅವರು ಹೇಳುವುದರಲ್ಲಿ ತಿರುಳಿಲ್ಲ.

ಆಸ್ತಿ ಇಲ್ಲದಿದ್ದವರೂ ಗೌರವಸ್ಥರಾಗಿದ್ದಾರೆ, ನಿಜ. ಆದರೆ ಇಲ್ಲಿ ಬರಿಯ ಗೌರವಸ್ಥನೆಂಬುದನ್ನು ನೋಡಿದರೆ ಸಾಕಾಗುವುದಿಲ್ಲ. ಇಲ್ಲಿ ಹಣಕಾಸಿನ ಜವಾಬ್ದಾರಿ ವಹಿಸಿರುವುದರಿಂದ ಆಸ್ತಿ ಇರಬೇಕು. ದೊಡ್ಡ ಪಟೇಲನಾಗಿ ಗೌರವಸ್ಥನಾಗಿರಬಹುದು; ಏನೋ ಕಾರಣದಿಂದ ಅವನ ಗುಮಾಸ್ತನಿಂದಲೋ ಅಥವಾ ಅವನ ಕೈಕೆಳಗಿನ ಯಾರಿಂದಲೋ ಹಣ ಪೋಲಾಗುತ್ತದೆ, ಸಾವಿರಾರು ರೂಪಾಯಿ ಹಾಳಾಗುತ್ತದೆ; ಅವನು ಗುಣವಂತನಾದರೂ ಹಣವನ್ನು ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಹೀಗೆಮಾಡಿರುವುದು ಒಳ್ಳೆಯದು. ವಸೂಲಾದ ಹಣವನ್ನು ಸುರಕ್ಷಿತವಾಗಿಟ್ಟಿರಲು ಅವನಿಗೆ ಯೋಗ್ಯತೆಯಿರಬೇಕು. ಅವನಿಗೆ ಆಸ್ತಿಯಿರಬೇಕು. ಆದುದರಿಂದ ಇದನ್ನು ತಂದಿರುವುದು ಸೂಕ್ತವಾಗಿದೆ. ಇದಕ್ಕೆ ಎಲ್ಲರೂ ಒಪ್ಪಿಗೆ ನೀಡಬೇಕೆಂದು ನನ್ನ ಅಭಿಪ್ರಾಯ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಇದು ಬಹಳ ಸೂಕ್ತವಾದ ಮತ್ತು ಪ್ರಾಮುಖ್ಯವಾದ ತಿದ್ದುಪಡಿ ಮಸೂದೆ. ಪ್ರಜಾ ಸರ್ಕಾರ ಬಂದಮೇಲೆ ಇಂಥ ತಿದ್ದುಪಡಿಯನ್ನು ತಂದಿರುವುದು ಶ್ಲಾಘನೀಯವಾದದ್ದು. ಸೋಷಿಯಲಿಷ್ಟ್ ಪಕ್ಷಕ್ಕೆ ಸೇರಿದ ಶ್ರೀಮಾನ್ ಗೋಪಾಲಗೌಡರು, ಎಲ್ಲರಿಗೂ ಸಮಾನಾವಕಾಶ ಸಮಾನ ಹಕ್ಕುಬಾಧ್ಯತೆ ಇರಬೇಕೆಂದು ಹೇಳುವವರು...

ಶ್ರೀ ಎಸ್. ಗೋಪಾಲಗೌಡ.—ನಾನು ಹಾಗೆ ಹೇಳಲಿಲ್ಲ. ವಂಶಪಾರಂಪರ್ಯ ಹಕ್ಕನ್ನು ರದ್ದುಮಾಡಿ ಎಂದು ಹೇಳಿದೆ.

ಶ್ರೀ ಟಿ. ಸಿ. ಬಸಪ್ಪ.—ಅವರ ವಾದ ಸರಣಿಯನ್ನು ಮುಂದುವರಿಸುತ್ತಾ ಈ ಕಾನೂನನ್ನು ತರುವುದಕ್ಕೆ ಬದಲು ಬೇರೆ ಒಂದು ಕಾನೂನು ತಂದು ವಂಶಪಾರಂಪರ್ಯವಾದ ಹಕ್ಕನ್ನು ಸಂಪೂರ್ಣವಾಗಿ ತೊಡೆದು ಹಾಕುವುದಾಗಿದ್ದರೆ ಅದನ್ನು ಒಪ್ಪುತ್ತಿದ್ದೆ ಎಂಬ ವಾದವನ್ನು ನಮ್ಮ ಮುಂದಿಟ್ಟಿದ್ದಾರೆ.

ಅಧ್ಯಕ್ಷರು.—ಪರಿಶೀಲನೆಮಾಡಬಹುದು ಎಂದು ಹೇಳಿದರು.

ಶ್ರೀ ಟಿ. ಸಿ. ಬಸಪ್ಪ.—ಆದುದರಿಂದ ಇದಕ್ಕೆ ಅವರ ಒಪ್ಪಿಗೆಯಿಲ್ಲವೆಂದು ಕಾಣುತ್ತದೆ. ಪ್ರಜಾಪ್ರಭುತ್ವದಲ್ಲಿ ಯಾವ ಸುಧಾರಣೆ ಮಾಡಬೇಕಾದರೂ ಅದು ಕ್ರಾಂತಿಕಾರಕವಾಗಿರುವುದಕ್ಕಿಂತ, ಎಂದರೆ revolutionary ಆಗಿರುವುದಕ್ಕಿಂತ evolutionary ಆಗಿರುವುದು ದೇಶಕ್ಕೂ ಜನರಿಗೂ ಕ್ಷೇಮವೆಂದು ಕಾಣುತ್ತದೆ. ಏಕೆಂದರೆ, ಈ ಕಾನೂನಿನಲ್ಲಿ ಒಂದೇಸಾರಿಗೆ ಒಂದು ಹಕ್ಕುಬಾಧ್ಯತೆಗೆ ಧಕ್ಕೆ ತರುವುದಕ್ಕಿಂತ ಕ್ರಮೇಣ ಆದರೆ ಒಳ್ಳೆಯದು. ಈ ಒಂದು ಕಾನೂನಿನಿಂದ ಇಡೀ ವಂಶಪಾರಂಪರ್ಯವಾದ ಹಕ್ಕಿನ ವಿಭಾಗದಲ್ಲಿ ಬಹಳ ಸುಧಾರಣೆಯಾಗುವುದಕ್ಕೆ ಕಾರಣವಾಗುತ್ತದೆ. ಆದುದರಿಂದ ಶ್ರೀಮಾನ್ ಗೋಪಾಲಗೌಡರು ಇದಕ್ಕೆ ಒಪ್ಪಬೇಕೆಂದು ಹೇಳುತ್ತೇನೆ.

ಸ್ವಾಮಿ, ಶ್ರೀಮಾನ್ ಜಿ. ಎ. ತಿಮ್ಮಪ್ಪಗೌಡರು ಈಗಾಗಲೇ ತಿಳಿಸಿರುವಂತೆ, ಗ್ರಾಮಗಳಲ್ಲಿ ಈ ಗ್ರಾಮ ನೌಕರರು ಬಹಳ ಪ್ರಭಾವಶಾಲಿಗಳಾಗಿದ್ದಾರೆ; ಡೆಪ್ಯುಟಿ ಕಮಿಷನರ್‌ರವರಿಗೆ ಇತರ ಅಧಿಕಾರಿಗಳಿಗೆ ವರ್ಗಾವಣೆ ಇದೆ. ಗ್ರಾಮ ನೌಕರರಿಗೆ ಜೀವಾವಧಿ ಅಧಿಕಾರವಿದ್ದು ಅದೇ ಗ್ರಾಮಗಳಲ್ಲೇ ಇರುವುದರಿಂದ ಡೆಪ್ಯುಟಿ ಕಮಿಷನರ್ ಮತ್ತು ಇತರ ಸರ್ಕಾರಿ ಅಧಿಕಾರಿಗಳಿಗಿಂತ ಹೆಚ್ಚಿನ ಒಂದು ದರ್ಜೆವನ್ನಿಟ್ಟುಕೊಂಡು ಅತ್ಯಂತ ಪ್ರಭಾವಶಾಲಿಗಳಾದ ಅಧಿಕಾರಿಗಳಾಗಿರುತ್ತಾರೆ. ಹಳ್ಳಿ ಜನರನ್ನೆಲ್ಲಾ ಇವರು ಹಿಡಿತದಲ್ಲಿ ಇಟ್ಟುಕೊಂಡು ಆ ಜನರಮೇಲೆ ಇವರ ಒಂದು Influence ಜಾಸ್ತಿ ಇಟ್ಟುಕೊಂಡಿರುತ್ತಾರೆಂದು ಹೇಳಿದರೆ ತಪ್ಪಾಗಲಾರದು. ಹೀಗೆ ಇವರು ಪ್ರಭಾವಶಾಲಿಗಳಾಗಿದ್ದುಕೊಂಡು ಹಣ ದುರುಪಯೋಗ ಮಾಡಿದರೆ ಅದನ್ನು ಪತ್ತೆಹಚ್ಚುವುದಕ್ಕೆ ಜಿಲ್ಲಾಧಿಕಾರಿಗಳಿಗಾಗಲಿ ಅಥವಾ ಸಬ್‌ಡಿವಿಜನ್ ಅಧಿಕಾರಿಗಳಿಗಾಗಲಿ ಬಹಳ ಕಷ್ಟವಾಗಿದ್ದಂಥ ಸನ್ನಿವೇಶಗಳು ಎಷ್ಟೋ ನಡೆದಿವೆ. ಜನರಮೇಲೆ ಈ ಗ್ರಾಮ ನೌಕರರ ಒಂದು ಪರಿಣಾಮಕಾರಿಯಾದ influence ಇರುವುದರಿಂದ ಜನರು ಮುಂದೆ ಬಂದು ಸಾಕ್ಷ್ಯಕೊಡಲು ಸಾಧ್ಯವಿಲ್ಲದಂತಾಗಿದೆ. ಸತ್ಯಾಂಶವನ್ನು ಹೊರಗೆಡವಲು ಅನೇಕರಿಗೆ ಮನಸ್ಸಿದ್ದರೂ ಇವರ ಪ್ರಭಾವಕ್ಕೆ ಅವರು ಹೆದರಿ ಸಾಕ್ಷ್ಯಹೇಳಲು ಹೊರಗೇ ಬರುವುದಿಲ್ಲ. ಹೀಗಾಗಿ ಎಷ್ಟೋ ಇಲಾಖೆಗಳಲ್ಲಿ ಈ ಗ್ರಾಮ ನೌಕರರಿಗೆ ನೇರವಾಗಿ ಸಂಬಂಧವಿಲ್ಲದಂಥ ಇತರ ಸರ್ಕಾರಿ ಬಾಬುಗಳಲ್ಲೂ ಇವರು ಕೈಹಾಕುತ್ತಿ

ರುವುದರಿಂದ, ಆ ಇಲಾಖೆಗಳಲ್ಲಿ ನಡೆದಿರತಕ್ಕ ಲೋಪ ದೋಷಗಳು ಹೊರಗೆ ಬರಲು ಸಾಧ್ಯವಿಲ್ಲದಂತಾಗಿದೆ. ಸತ್ಯಾಂಶ ಹೀಗೆ ಹೊರಬೀಳಲು ಅವಕಾಶವಿಲ್ಲದೆ ನೂರಾರು ದೂರುಗಳನ್ನು ವರ್ಷಾನುಗಟ್ಟಲೆ ಪೆಂಡಿಂಗ್ ಹಾಕಿಕೊಂಡು ಬರುತ್ತಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಸಸ್ಪೆಂಡ್‌ಮಾಡಿಸಿಟ್ಟರೆ ಅವರೇನು ಊರಿನಲ್ಲೇ ಇರುತ್ತಾರೋ ಅಥವಾ ಊರುಬಿಟ್ಟು ಹೊರಗೆ ಹೋಗುತ್ತಾರೋ ?

ಶ್ರೀ ಟಿ. ಸಿ. ಬಸಪ್ಪ —ಸಸ್ಪೆಂಡ್ ಮಾಡಿದರೆ, ತಪ್ಪು ಸಾಬೀತಾದರೆ ಕೆಲಸದಿಂದಲೂ ಸರ್ಕಾರದವರು ತೆಗೆಯುತ್ತಾರೆ ಎಂಬ ಒಂದು ನಂಬಿಕೆಯುಂಟಾಗಿ ಜನರು ಧೈರ್ಯದಿಂದ ಸಾಕ್ಷಿ ಹೇಳಲು ಮುಂದೆ ಬರಲು ಬಹಳ ಅನುಕೂಲವಾಗುತ್ತದೆ. ಹಳ್ಳಿಯಲ್ಲಿ ಜನರಿಗೆ ಸಾಕಷ್ಟು ಕೆಲಸವಿಲ್ಲವೆಂಬುದು ತಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರವೇ ಆಗಿದೆ. ಆದರೆ ಪಟ್ಟಣಗಳ ವಿಚಾರವೇ ಬೇರೆ. ಹಳ್ಳಿಗಳಲ್ಲಿ ಇಂಥ ಪ್ರಭಾವ ಶಾಲಿಗಳು ಮಾಡಿರತಕ್ಕ ಅಥವ ಮಾಡತಕ್ಕ ಲೋಪ ದೋಷಗಳನ್ನು ತಿಳಿಸಲು ಅನೇಕರು ಸತ್ಯಾಂಶ ಹೊರಗೆಡಹಲು ಸಿದ್ಧರಾಗಿರುತ್ತಾರೆ. ಆದರೆ ಅವರು ಈ ದಿವಸ ಮುಂದೆ ಬಂದು ಹೇಳುವುದಕ್ಕೆ ಅವಕಾಶ ವಿಲ್ಲದಂತಾಗಿದೆ. ಈಗ ಸರ್ಕಾರದವರು ಇಂಥ ವಿಚಾರಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿ ಇಂಥ ಒಂದು ತಿದ್ದುಪಡಿಯನ್ನು ಈ ಕಾನೂನಿಗೆ ತರತಕ್ಕದ್ದು ತೀರ ಆವಶ್ಯಕವೆಂದು ತಿಳಿದು ಬಂದುದರ ಪ್ರಯುಕ್ತ ಇದನ್ನು ಈಗ ತರಲಾಗಿದೆ. ಈ ತಿದ್ದುಪಡಿಗಳು ಬಹಳ ಆವಶ್ಯಕವೆಂದು ನಾನೂ ಹೇಳುತ್ತೇನೆ.

ಇನ್ನು ತಾವು Section 8 of the Principal Actಗೆ ಸೂಚಿಸಿರತಕ್ಕ ತಿದ್ದುಪಡಿಗಳು ಎಂದರೆ.—

> "No person shall be eligible for appointment to the Office of Patel or Shanbhog unless (1) he owns landed property of the value of not less than twice the Annual Jamabandy of the village or (2) he furnishes a cash security of not less than one-fourth of the Annual Jamabandy of the village".

ಎಂದು ಈ ತರಹ ಒಂದು qualifications ಹಾಕಿರತಕ್ಕದ್ದರ ಆಗತ್ಯ ಆಷ್ಟಿಷ್ಟೆಂದು ನಾನು ಮತ್ತೆ ತಮಗೆ ಒತ್ತಿ ಹೇಳಬೇಕಾದ ಅವಶ್ಯಕತೆಯಿಲ್ಲ. ಗ್ರಾಮ ನೌಕರರು ಒಂದು ಆಸ್ತಿಯನ್ನಾಗಲಿ ಇಟ್ಟುಕೊಳ್ಳದೆ ಅಥವಾ ಒಂದ ಸೆಕ್ಯೂರಿಟಿಯನ್ನಾಗಲಿ ಕೊಡದೆ ಇರುವಂಥಾ ಸಂದರ್ಭಗಳು ಅನೇಕವಿವೆ. ಅವರು ಕಂದಾಯದ ಹಣ ಇತ್ಯಾದಿಗಳನ್ನು ಬಳಸಿ ಊರುಗಳನ್ನೇ ಬಿಟ್ಟು ಹೋಗತಕ್ಕಂಥ ಸಂದರ್ಭಗಳೂ ಇವೆ. ಆದಕಾರಣ ಇವರು ಸರಿಯಾದ ಒಂದು ಸೆಕ್ಯೂರಿಟಿ ಮತ್ತು ಷೂರಿಟಿಗಳನ್ನು ಕೊಡತಕ್ಕದ್ದು ಅತ್ಯಗತ್ಯ. ಆದರೆ ಕೆಲವು ಮಾನ್ಯ ಸದಸ್ಯರು 'ಮಂತ್ರಿಗಳಾಗಿರತಕ್ಕವರಿಗೇ ಇಂಥ ಒಂದು ಸೆಕ್ಯೂರಿಟಿ ಕೊಡಬೇಕೆಂದು ಹೇಳದೆಇರುವಾಗ ಈ ಗ್ರಾಮ ನೌಕರರಿಗೆ ಸೆಕ್ಯೂರಿಟಿ ಕೇಳತಕ್ಕದ್ದು ಯಾವ ನೀತಿ' ಎಂಬ ಒಂದು ವಾದವನ್ನೆತ್ತಿದ್ದಾರೆ. ಆದರೆ ಮಂತ್ರಿಗಳು ಪಟೇಲರುಗಳಹಾಗೆ ನೇರವಾಗಿ ಹಣದಲ್ಲಿ ವ್ಯವಹರಿಸುವುದಿಲ್ಲ. ಪಟೇಲರೇ ಹಣ ವಸೂಲ್ಮಾಡಿಕೊಂಡು... . ...

ಶ್ರೀ ಡಿ. ದೇವರಾಜ ಅರಸ್.—ಕೆಲವು ದಿನಗಳತನಕ ಆ ಹಣ ಅವರ ಕೈಲೇ ಇರುತ್ತದೆ ಯಲ್ಲವೇ ?

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ದೇಶದಲ್ಲಿರತಕ್ಕ ಎಲ್ಲಾ ಪಟೇಲ್ ಶ್ಯಾನುಭೋಗರುಗಳೂ ಹಾಗೆಯೇ ಇರುತ್ತಾರೆಂದು ಹೇಳುತ್ತೀರಾ ?

ಶ್ರೀ ಟಿ. ಸಿ. ಬಸಪ್ಪ.—ಆ ವಿಷಯಗಳನ್ನೆಲ್ಲಾ ಸರ್ಕಾರದವರು ದೀರ್ಘಾಲೋಚನೆ ಮಾಡಿಯೇ ತಂದಿದ್ದಾರೆ. ಹಾಗೆ ಇದರಲ್ಲಿ ಕೆಲವರು ಒಳ್ಳೆಯವರೆಂದು ಅವರನ್ನು ಬದುಕಿಸುವುದಕ್ಕೆ ಹೋದರೆ ಅದರಿಂದ ತುಂಬ ಅಗಾಧವಾದ ಸಮಸ್ಯೆಗಳು ತಲೆ ಎತ್ತಬಹುದು. ಆದರೆ ಈ ದಿವಸ ಈ ಕಾನೂನಾದರೂ ಎಂಥವರಿಗೆ ಅನ್ವಯಿಸುತ್ತದೆಯೆಂದರೆ ಯಾರು ಅಂಥ ಅಕೃತ್ಯಗಳನ್ನು ಮಾಡುತ್ತಾರೋ ಅಂಥವರಿಗೆ ಮಾತ್ರ ಅನ್ವಯಿಸತಕ್ಕದ್ದಾಗಿದೆಯೇ ಹೊರತು ಒಳ್ಳೆಯವರಿಗೆ ಇದರಿಂದೇನೂ ತೊಂದರೆಯಿಲ್ಲ. ಆದ್ದರಿಂದ ಗ್ರಾಮಾಧಿಕಾರಿಗಳಿಗೆ ಇಂಥ ಒಂದು ಪ್ರಾವಿಸೋ ಇರುವಂತೆ ಮಾಡಿರತಕ್ಕದ್ದು ಬಹಳ ಸೂಕ್ತವಾಗಿರುವುದರಿಂದ ಇದನ್ನು ಯಾರೂ ವಿರೋಧಿಸದೆ ಎಲ್ಲರೂ ಇದಕ್ಕೆ ಬೆಂಬಲ ನೀಡಿ, ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—'The Mysore Village Officers (Amendment) Bill, 1953'—ಇದನ್ನು ನಾನು ಬಹಳವಾಗಿ ವಿರೋಧಿಸುತ್ತೇನೆ. ಏತಕ್ಕೆಂದರೆ ಈಗ ಇದು ಬಂದಿರತಕ್ಕ ವಿಧದಲ್ಲಿ ಇದನ್ನು ವಿರೋಧಿಸಬೇಕಾದುದು ಅಗತ್ಯವೆಂದು ನನಗೆನ್ನಿಸಿದೆ. ಈ ಮಸೂದೆಯನ್ನು ಸೆಲೆಕ್ಟ್ ಸಮಿತಿಗೆ ಒಪ್ಪಿಸಬೇಕೆಂಬುದಾಗಿ ನಾನೊಂದು ಸೂಚನೆಯನ್ನೂ ಸಹ ಕೊಟ್ಟಿದ್ದೆನು.

ಈಗ ತಾವು ಈ ಪಟೇಲ್ ಶ್ಯಾನುಭೋಗರ ನೇಮಕದ ಬಗ್ಗೆ ಅವರಿಗಿರಬೇಕಾದ ಅರ್ಹತೆಗಳೇನೆಂಬ ವಿಚಾರದಲ್ಲಿ ತಾವು 3ನೆಯ ಕ್ಲಾಜಿನಲ್ಲಿ ಏನು ವಿಷಯ ತಿಳಿಸಿದ್ದೀರೋ ಆದರ ಬಗ್ಗೆ ಮೊದಲು ನಾನು ಒಂದೆರಡು ಮಾತುಗಳನ್ನಾಡಬೇಕೆಂದಿದ್ದೇನೆ. ನಮ್ಮಲ್ಲಿ ಅನೇಕ ಗ್ರಾಮಗಳಲ್ಲಿ ತರಿ ಮತ್ತು ಬಾಗಾಯ್ತು ಜಮೀನು ಹೆಚ್ಚಾಗಿರುವುದರಿಂದ 20–30–40 ಸಾವಿರ ರೂಪಾಯಿಗಳ ತನಕ ಜಮಾ ಬಂದಿಯಿರುವುದು ಸ್ವಾಭಾವಿಕ ಇಂಥ ಗ್ರಾಮಗಳಿಗೆ ಯಾರಾದರೂ ಒಬ್ಬ ಪಟೇಲನಾಗಬೇಕಾದರೆ ಆತನಿಗೆ 80 ಸಾವಿರ ರೂಪಾಯಿಗಳ ಆಸ್ತಿಯಿರಬೇಕೆಂದೂ, ಹಾಗೆ 80 ಸಾವಿರ ರೂಪಾಯಿಗಳ ಆಸ್ತಿ ಇದ್ದರೇ ಆತನು ಆ ಕೇಸಕ್ಕೆ ಅರ್ಜಿ ಹಾಕಲು ಅವಕಾಶ ವಿರುತ್ತದೆಯೆಂದೂ ಹೇಳಲಾಗಿದೆ. This clause is definite.

> 'A person will be eligible for appointment as a Patel or a Shanbhog if he owns lands to the extent of twice the total jamabandi'.

ಅಥವಾ ಅಷ್ಟು ಆಸ್ತಿ ಇಲ್ಲದೆ ಇದ್ದರೆ ತಾವು 2ನೇ ಕ್ಲಾಜಿನಲ್ಲಿ ಹೇಳಿರ ವಂತೆ ಆ ಗ್ರಾಮದ ಜಮಾಬಂದಿ ಮೊಬಲಗಿನಲ್ಲಿ ನಾಲ್ಕನೇ ಒಂದು ಭಾಗದ ಹಣವನ್ನು ಡಿಪಾಜಿಟ್ಟಾಗಿ ಹಾಜರ್ಮಾಡಿದ ಪಕ್ಷದಲ್ಲಿ ಆತನು ಪಟೇಲನಾಗಬಹುದೆಂದು ಹೇಳಲಾಗಿದೆ. ಎಂದರೆ 20 ಸಾವಿರ ಜಮಾಬಂದಿಯಿದ್ದರೆ, ಆಗ ಪಟೇಲನಾಗತಕ್ಕವನು 5 ಸಾವಿರ ರೂಪಾಯಿ ಡಿಪಾಜಿಟ್ ಕೊಡಬೇಕೆಂದು

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.)

ಹೇಳಿದ ಹಾಗಾಯಿತು. ಸ್ವಾಮಿ ಈ ಕಾನೂನಿನ ಪ್ರಕಾರ 3ನೆಯ ಸೆಕ್ಷನ್ 2ನೆಯ ಸಬ್ ಹೆಡ್ಡಿನಲ್ಲಿ:

"No person shall be eligible for appointment to the Office of Patel or Shanbhog unless he furnishes a Cash Security of not less than one-fourth of the annual jamabandy of the village"

ಎಂದು ಇದೆ. ಸಾಮಾನ್ಯವಾಗಿ ಯಾವುದಾದರೂ ಒಂದು ಗ್ರಾಮದಲ್ಲಿ 10 ಸಾವಿರ ರೂಪಾಯಿಗಳ ಜಮಾಬಂದಿಯಿದ್ದರೆ, ಆಗ $2\frac{1}{2}$ ಸಾವಿರ ರೂಪಾಯಿಗಳ ಕ್ಯಾಷ್ ಸೆಕ್ಯೂರಿಟಿಯನ್ನು ಕೊಟ್ಟು ಯಾರುಬೇಕಾದರೂ ಆ ಗ್ರಾಮಕ್ಕೆ ಪಟೇಲ್ ಶ್ಯಾನುಭೋಗರಾಗಬೇಕಾಗಿರುತ್ತದೆ. ಇನ್ನು ಈಗ ಜಾರಿಯಲ್ಲಿರತಕ್ಕ ಲ್ಯಾಂಡ್ ರೆವೆನ್ಯೂ ಕೋಡಿನ ರೂಲ್ಸಿನ ಪ್ರಕಾರ ಪಟೇಲ್ ಶ್ಯಾನುಭೋಗರಿಗೆ ಕೊಡತಕ್ಕ ಪೋಟಿಗೆಯಾದರೋ ಶ್ಯಾನುಭೋಗನಿಗೆ ಶೇಕಡ 5 ರಂತೆಯೂ ಪಟೇಲನಿಗೆ ಶೇಕಡ 3ರ ರಂತೆಯೂ ಕೊಡುತ್ತಿದ್ದೀರಿ. ಆಗ ಅವರಿಗೆ ಬರತಕ್ಕ ಪೋಟಿಗೆಯೇನೆಂಬುದನ್ನು ಲೆಕ್ಕಹಾಕಿದರೆ ಅವರು ಕೊಡಬೇಕಾಗಿರುವ ಡಿಪಾಜಿಟ್ಟಿನಮೇಲೆ ಬಡ್ಡಿಗೂ ಸಾಕಾಗುವುದಿಲ್ಲ. ಹೀಗೆ ತಾವು, ಅವರು ನಗದಾಗಿ ನಿಮಗೆ ಕೊಡತಕ್ಕ ಕ್ಯಾಷ್ ಸೆಕ್ಯೂರಿಟಿ $2\frac{1}{2}$ ಸಾವಿರ ರೂಪಾಯಿಗಳಿಗೆ ಬಡ್ಡಿಗೆ ಕೂಡ ಸಾಕಾಗದೆ ಇರುವಷ್ಟು ಪೋಟಿಗೆಯನ್ನು ಕೊಡುತ್ತೀರಿ. ಹೀಗೆ ನೀವು ಪೋಟಿಗೆಯೆಂದು ಹೇಳಿಕೊಡತಕ್ಕದ್ದು ಅವರ ಸೆಕ್ಯೂರಿಟಿ ಹಣದ ಬಡ್ಡಿಗೂ ಕೂಡ ಸಾಕಾಗುವುದಿಲ್ಲ. ಆ ಪಟೇಲ್ ಮತ್ತು ಶ್ಯಾನುಭೋಗಿಕೆ ಕೆಲಸಗಳಿಗೆ ಜನರು, ನೀವು ಪೋಟಿಗೆ ಕೊಡುತ್ತೀರಿ, ಅದರಿಂದ ನಾವು ಉದ್ಧಾರವಾಗುತ್ತೇವೆಯೆಂದು ಯಾರೂ ಬರುತ್ತಿಲ್ಲ. ನಾನು ಹೇಳುತ್ತೇನೆ, ಅವರು ಈ ಕೆಲಸಗಳನ್ನು ಈ ದಿವಸ ಮಾಡುತ್ತಿರುವುದು, 'ಏನೋ ನಮ್ಮ ತಂದೆ, ತಾತ, ಮುತ್ತಾತಂದಿರುಗಳು ಮಾಡುತ್ತಿದ್ದಂಥ ಕೆಲಸ ಇದು, ಇದನ್ನು ನಾವು ಈ ದಿವಸ ಬಿಟ್ಟು ಬಿಟ್ಟರೆ ನಮ್ಮ ವಂಶ ಪಾರಂಪರ್ಯವಾಗಿ ಬಂದಂಥ ಗೌರವ ಹೋಗಿ ಬಿಡುತ್ತದೆಯೋ ಏನೋ' ಎಂಬ ಒಂದು ದೂರಾಲೋಚನೆಯಿಂದ ಕೆಲಸಕ್ಕೆ ಬರುತ್ತಿದ್ದಾರೆಯೇ ಹೊರತು ನಿಮ್ಮ ಪೋಟಿಗೆ ಆಶೆಗಾಗಿ ಅಲ್ಲ. ಇಂಥ ಷರತ್ತುಗಳನ್ನು ನೀವು ಹಾಕುವುದಾದರೆ ಯಾರೂ ಈ ಕೆಲಸಗಳಿಗೆ, ಅದರಲ್ಲೂ ನಿಮಗೆ ಸೆಕ್ಯೂರಿಟಿ ಕೊಟ್ಟು, ಬರಲಾರರು. ತಾವು ಹೇಳತಕ್ಕ ಪ್ರಕಾರ ನೋಡಿದರೆ, ಅವರು mismanagement ನಿಂದ misappropriation ಅಥವಾ ಕಂದಾಯದ ಹಣವನ್ನು ದಸ್ತು ಮಾಡಿಬಿಟ್ಟರೆ ಸರ್ಕಾರಕ್ಕೆ ಒಂದು ಕಾಸೂ ಸಹ ವಾಪಸ್ಸು ಬರುವುದಕ್ಕೆ ಈಗ ಅವಕಾಶವಿಲ್ಲವೆಂದು ತಾವು ಹೇಳುತ್ತಿದ್ದೀರಿ. ಈ ದಿವಸ ಅನೇಕರು ಈ ಪಟೇಲ್ ಕೆಲಸ ನೋಡುತ್ತಿರುವವರು, ತಾವು ಎಷ್ಟು ಬಡವರಾಗಿದ್ದರೂ, ಅವರು ವಸೂಲ್ಮಾಡತಕ್ಕ ಕಂದಾಯದ ಮೊಬಲಗನ್ನು ಜೋಪಾನವಾಗಿ ದೇವರ ಮುಡುಪಿನೋಪಾದಿಯಲ್ಲಿ ತಂದಿಟ್ಟುಕೊಂಡಿದ್ದು ಅದನ್ನು ಖಜಾನೆಗೆ ಭರ್ತಿ ಮಾಡುತ್ತಿದ್ದಾರೆ. ಇಂಥಾ ನೂರಾರು ನಿದರ್ಶನಗಳು ಈ ದಿವಸ ಇರುತ್ತವೆ. ಒಂದು ವೇಳೆ ತಾವು ಈ ದಿವಸ ಅವರಿಗೆ ಕೆಲಸ ಕೊಡುವಾಗ ಈ ಕಾನೂನು ಅನ್ವಯವಾದರೆ, ಆ ಪಟೇಲ ಶ್ಯಾನುಭೋಗರು ಲಕ್ಷಾಧೀಶರಾಗಿರಬೇಕಾಗುವುದು; ಹಾಗೆ ನಿಮ್ಮ ಕಡೆಯಿಂದ ಅವರು ಕೆಲಸ ಪಡೆದುಕೊಂಡನಂತರ ಅವರು ಯಥಾಪ್ರಕಾರ ಬಡತನಕ್ಕೇ ಬರಬಹುದು. ಅಂಥ ಸಮಯದಲ್ಲಿ ತಾವು ಈ ಪಟೇಲ ಶ್ಯಾನುಭೋಗಿಕೆಯನ್ನು ವಾಪಸ್ಸು ತೆಗೆದು ಕೊಳ್ಳುತ್ತೀರಾ? ಅಥವಾ ಅತನಿಂದ ಅದನ್ನು ಬದಲಾಯಿಸುವುದಕ್ಕೆ ಹೊತ್ತಿದೆಯೇ? ಹಾಗೆ ಆತನು ವಸೂಲಿ ಮಾಡಿದ ದುಡ್ಡನ್ನು ತಿಂದು ಹಾಕುತ್ತಾನೆಂಬ ಅನುಮಾನ ಬಂದರೆ ಅಂಥ ಸಂದರ್ಭದಲ್ಲಿ ತಾವು ಆತನ ಹಕ್ಕನ್ನು ವಜಾ ಮಾಡಿಬಿಡಿ. ಅಂಥವರ ವಿಚಾರದಲ್ಲಿ ತಾವೇನು ಬೇಕಾದರೂ ಮಾಡಿ. ಅದಕ್ಕೆ ನಾನು ಬೇಡವೆನ್ನುವುದಿಲ್ಲ. ಆದರೆ ತಾವು ಈ ದಿವಸ ಎಲ್ಲ ಪಟೇಲ್ ಶ್ಯಾನುಭೋಗರನ್ನು ಒಟ್ಟಾಗಿ ಸೇರಿಸಿ ಅವರ ಮಾನ ಮರ್ಯಾದೆಗಳನ್ನೆಲ್ಲಾ ಕಳೆದುಕೊಳ್ಳುವಂಥ ಪ್ರಸಂಗಕ್ಕೆ ಎಡೆ ಮಾಡಿದ್ದೀರಿ. ಒಂದು ಗ್ರಾಮದಲ್ಲಿ ಒಂದುಸಾವಿರ ಎಕರೆ ತರಿ ಜಮೀನಿದ್ದರೂ ಎಕರೆಗೆ $7\frac{1}{2}$ ರೂಪಾಯಿಗಳಂತೆ ಕಂದಾಯ ಲೆಕ್ಕ ಹಾಕಿದರೂ ಜಮಾಬಂದಿ 7,500 ರೂಪಾಯಿಗಳಾಗುತ್ತವೆ. ಇದರ ಜೊತೆಗೆ ಇನ್ನೂ 200 ಎಕರೆ ಬಾಗಾಯ್ತು, ಖುಷ್ಕಿ ಇತ್ಯಾದಿ ಜಮೀನುಗಳ ಕಂದಾಯ ಲೆಕ್ಕ ಹಾಕುವುದರೊಳಗೆ ಅದು 10 ಸಾವಿರಕ್ಕೆ ಬಂದೇ ಬರುತ್ತದೆ. ಇಂಥ ಗ್ರಾಮಕ್ಕೆ ಆತನು $2\frac{1}{2}$ ಸಾವಿರ ರೂಪಾಯಿ ಕ್ಯಾಷ್ ಸೆಕ್ಯೂರಿಟಿ ಕೊಡಬೇಕಾಗಿರುತ್ತದೆ. ಆದರೆ ತಾವು ಇಲ್ಲಿ ಹೇಳಿರತಕ್ಕದ್ದು ಜಮಾಬಂದಿ ಎಂದು. ನಾನೀಗ ಲೆಕ್ಕ ಹಾಕುತ್ತಿರುವುದು ಬರಿ ಐಜ್ ಕಂದಾಯ ಮಾತ್ರ. ಇದಕ್ಕೆ ಇತರ ಸೆಸ್ಸುಗಳೆಲ್ಲಾ ಸೇರಿದರೆ ಜಮಾಬಂದಿ ಇನ್ನೂ ಹೆಚ್ಚಾಗುತ್ತದೆ. ನನ್ನ ಉದ್ದೇಶ್ಯ ಇಷ್ಟೇ. ತಾವು ಅವರ ಮೇಲೆ ಒಂದು ಹತೋಟಿಯನ್ನೂ ಇಟ್ಟುಕೊಳ್ಳಬೇಡಿ ಎಂದು ಹೇಳುವುದಿಲ್ಲ. ಅಲ್ಲದೆ ಅವರು ದಸ್ತು ಮಾಡಿ ಕಂದಾಯದ ಹಣವನ್ನೂ ತಿಂದು ಹಾಕಲಿ, ನೀವು ಸುಮ್ಮನಿರಿ ಎಂದೂ ನಾನು ಹೇಳುವುದಿಲ್ಲ. ಅಂಥ ವಿಚಾರಗಳ ಬಗ್ಗೆ ಒಂದು ಭದ್ರತೆ ಇರಲೇಬೇಕು. ಆದರೆ ಅಂಥ ಒಂದು ಭದ್ರತೆ ಈಗಾಗಲೇ ಇದೆ. ನಿಮಗೆ ಇರತಕ್ಕ 18 ಸಾವಿರ ಗ್ರಾಮಗಳ ಪೈಕಿ ನಿಮ್ಮ ಸರ್ಕಾರದ ದುಡ್ಡನ್ನು ತಿಂದು ಹಾಕತಕ್ಕಂಥವರು 10-15 ಜನರಿದ್ದರೆ ಹೆಚ್ಚಾಯಿತು. ಅದಕ್ಕಾಗಿ ಅವರೆಲ್ಲರ ಕೀರ್ತಿಗೆ ಕೇಡಾಗತಕ್ಕ ರೀತಿಯಲ್ಲಿ ತಾವು ವರ್ತಿಸಬಾರದು. ಒಂದು ವೇಳೆ ಅವರು ನಿಮ್ಮಿಂದ ಕೆಲಸ ತೆಗೆದುಕೊಳ್ಳುವಾಗ ಅವರಿಗೆ ಸ್ವತ್ತಿದ್ದು, ಅನಂತರ ಅವರು ಅದನ್ನು ಮಾರಾಟ ಮಾಡಿಬಿಟ್ಟರೆ ತಾವೇನು ಮಾಡುತ್ತೀರಿ? ತಮ್ಮಿಂದ ಅವರ ಕೆಲಸ ಕಿತ್ತುಕೊಳ್ಳುವುದಕ್ಕಾಗುತ್ತದೇನು? ಅಥವಾ ಒಂದು ವೇಳೆ ಒಂದು ಕುಟುಂಬದಲ್ಲಿ 4-5 ಜನ ಅಣ್ಣತಮ್ಮಂದಿರುಗಳಿರುತ್ತಾರೆ, ಅವರ ಪೈಕಿ ಒಬ್ಬ ಇಡೀ ಸ್ವತ್ತನ್ನೆಲ್ಲಾ ತೋರಿಸಿ ತಾನು ಪಟೇಲನಾಗುತ್ತಾನೆ. ಅನಂತರ ಅವರೆಲ್ಲಾ ವಿಭಾಗವಾಗುತ್ತಾರೆ. ಆಗ ನಿಮ್ಮ ಪಟೇಲಿ ಆಫೀಸು ಹೇಗೆ ಮಾಯವಾಗುತ್ತದೆ? ಈ ನಾನಾ ಲೋಪ ದೋಷಗಳು ಈ ಮಸೂದೆಯಲ್ಲಿರುವುದರಿಂದ ನಾನು ಇದನ್ನು ಸಲೆಕ್ಟ್ ಸಮಿತಿಗೆ ಕಳುಹಿಸಿಕೊಡಬೇಕೆಂದು ಒಂದು ಮೋಷನ್ ಸಹ ಕೊಟ್ಟಿದ್ದೇನೆ. ಆದಕಾರಣ ಈ ವಿಷಯವನ್ನು ಅನುಭವಶಾಲಿಗಳೂ ತಜ್ಞರೂ ಆದಂಥ ಜನರ ಮುಂದೆ ತಂದಾಗ ಈ ವಿಷಯಗಳನ್ನೆಲ್ಲಾ ಚೆನ್ನಾಗಿ ಪರಿಶೀಲನೆ ಮಾಡಿ ಇದನ್ನು ಇನ್ನೂ ಸರಿಯಾದ ಒಂದು ಉತ್ತಮ ರೀತಿಯಲ್ಲಿ ತರಬೇಕೆಂದೂ, ಇರತಕ್ಕ ಪಟೇಲ್ ಶ್ಯಾನುಭೋಗರುಗಳ ಮಾನ ಮರ್ಯಾದೆಯನ್ನು ಹೀಗೆಲ್ಲಾ ಕಳೆಯುವಂತೆ ಮಾಡಬಾರದೆಂದೂ ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

3 P.M.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಈಗಿರತಕ್ಕ ಪಟೇಲ್ ಶ್ಯಾನ ಭೋಗರುಗಳಿಗೆ ಸ್ವಲ್ಪ ಆಸ್ತಿಯಿದ್ದರೆ, ಅದನ್ನು ಪುನಃ revalue ಮಾಡಿ, ಅವನಿಗೆ ನೋಟೀಸ್ ಕೊಟ್ಟು additional security ಕೊಡಬೇಕೆಂದು ಅವನನ್ನು ಕೇಳುತ್ತೀರಾ? ಅಥವಾ ಅವನು ಅಲ್ಲಿಯೇ ಹೆಚ್ಚಿಗೆ ಜಮೀನು ಕೊಂಡುಕೊಳ್ಳುವುದಕ್ಕೆ ಯಾರೂ ಜಮಿನನ್ನು ಕೊಡದೆ ಇದ್ದರೆ, ಸರ್ಕಾರದವರೇ ಅವನಿಗೆ ಜಮೀನು ಕೊಟ್ಟು value ಭರ್ತಿಮಾಡುತ್ತೀರಾ? ಇದಿಲ್ಲದೆ ಹೋದರೆ ನೀವು ಈ ದಿವಸ 8ನೆಯ ಸೆಕ್ಷನ್‌ನಲ್ಲಿ eligibility for appointment ಎಂದೇನು ಹೇಳಿದ್ದೀರೋ ಆ ಮಾತಿನ ಅರ್ಥವೇ ಬೇರೆಯಿರಬೇಕು. ನಿಮ್ಮ ಮಸೂದೆಯಂತೆ ಸಂಸ್ಥಾನದಲ್ಲಿರತಕ್ಕ ಎಲ್ಲಾ ಪಟೇಲ್ ಶ್ಯಾನುಭೋಗರುಗಳಿಗೂ ನೋಟೀಸ್ ಕೊಟ್ಟು, ಹೊಸದಾಗಿ ಆಸ್ತಿ ಎಷ್ಟು ಬೇಕೋ ಅಷ್ಟು ಕೊಂಡುಕೊಳ್ಳ ಇಲ್ಲದಿದ್ದರೆ, ಕೆಲಸದಿಂದ ತೆಗೆಯುತ್ತೀವೆಂದು ಹೇಳಿದ ಹಾಗಾಯಿತು. ಇದರಿಂದ ಎಷ್ಟೋ ವೇಳೆ ಸರಿಯಾಗಿ ಶಿಸ್ತಿನಿಂದ ಕೆಲಸಮಾಡುತ್ತಿದ್ದಂಥವನು ತನ್ನ ಹಕ್ಕನ್ನು ಬಿಟ್ಟುಕೊಡಬೇಕಾಗಿಬರಬಹುದು. ಇನ್ನೊಬ್ಬ ಪುಂಡು ಪೋಕರಿಯಾಗಿದ್ದು ಯಾರು ಜನರಿಗೆ ಕಿರುಕುಳ ಕೊಡುತ್ತಿರುತ್ತಾನೋ ಅವನು ಆಸ್ತಿಯಿರುವ ಒಂದು ಅರ್ಹತೆಯಮೇಲೆಯೇ ಕೆಲಸಕ್ಕೆ ಬರಬಹುದು. ಅಲ್ಲಿಗೆ ಈ ಕೆಲಸ ಯೋಗ್ಯತೆ ಮತ್ತು ಮನೆತನದಮೇಲೆ ಹೋಗುವುದಿಲ್ಲ. ಪಟೇಲ್ ಶ್ಯಾನುಭೋಗರಲ್ಲಿ ಏಳು ಹಳ್ಳಿ, ಮೂರು ಹಳ್ಳಿ ಎಂದಿರುತ್ತಾರೆ. ಅವರು ಒಳ್ಳೆಯ ಮನೆತನಸ್ತರಾದರೂ ನೀವು ಹೇಳಿದ ಹಾಗೆ ಆಸ್ತಿಯಿಲ್ಲದಿರಬಹುದು. ಆಸ್ತಿ ಸ್ವಲ್ಪ ಕಡಮೆಯಿದ್ದರೂ lesser valueನ್ನೇ ಒಪ್ಪಿಕೊಳ್ಳುವ ಅಧಿಕಾರವನ್ನು ಡೆಪ್ಯುಟೀ ಕಮಿಷನರಿಗೆ ಕೊಟ್ಟಿದೆಯೆಂದು ಹೇಳಬಹುದು. ಹಾಗೆ ಹೇಳಿದ್ದರೂ ಕೂಡ lesser value ಎಂದರೆ, ಎಷ್ಟಾದರೂ ಕಡಮೆ ಸೆಕ್ಯೂರಿಟಿಯನ್ನು ಒಪ್ಪಿಕೊಳ್ಳಬಹುದೆಂತಲೇ? 20 ಸಾವಿರ ರೂಪಾಯಿಗಳ ಆಸ್ತಿ ಸೆಕ್ಯೂರಿಟಿ ಇರಬೇಕೆಂದಿದ್ದರೆ 19 ಸಾವಿರಕ್ಕೆ ಒಪ್ಪಿಕೊಳ್ಳಬಹುದು; ಇಲ್ಲವೇ 18,000 ರೂಪಾಯಿಗಳ ಸೆಕ್ಯೂರಿಟಿ ಕೊಟ್ಟರೂ ಒಂದು ವೇಳೆ ಒಪ್ಪಿಕೊಳ್ಳಬಹುದು, ಅಷ್ಟೆ. ಇಷ್ಟು ಸೆಕ್ಯೂರಿಟಿ ಕೊಡುವುದಕ್ಕಾಗದಿದ್ದರೆ ಅವನ ಗತಿಯೇನು? ಅಥವಾ ಈ ಸೆಕ್ಯೂರಿಟಿಗಳೆಲ್ಲಾ ಇನ್ನು ಹೊಸದಾಗಿ ಆಗುವಂತಹ appointmentsಗೆಂದೇನಾದರೂ ನಿಮ್ಮ ಭಾವನೆಯೇ? ಹಾಗೆ ಹೊಸದಾದ appointments ಎಂದರೆ ಹೊಸದಾಗಿ ಹಳ್ಳಿಗಳನ್ನೇನಾದರೂ ಕಟ್ಟಿ ಅಲ್ಲಿಗೆ ನೇಮಿಸುವುದೇನಾದರೂ ಇದೆಯೇನು? ಹೀಗೆಲ್ಲಾ ಹೇಳಿ ಆ ಶ್ಯಾನುಭೋಗನನ್ನು ಮನೆಗೆ ಕಳುಹಿಸಬೇಕೆನ್ನುವ ಬದಲು, ಈ ಶ್ಯಾನುಭೋಗ—ಪಟೇಲರೇ ಬೇಡವೆಂದು ನೇರವಾಗಿ ಒಂದು ಬಿಲ್ಲನ್ನು ಬೇಕಾದರೆ ತನ್ನಿ. ಹಾಗೆ ಮಾಡದೆ ಈ ಮುಚ್ಚು ಮರೆಯೇಕೆ? ಈಗಿರುವ ರೀತಿಯಲ್ಲಿ ನೀವು ಅವರಿಂದ ಸೆಕ್ಯೂರಿಟಿಗಳನ್ನು ಕೇಳುವುದಾದರೆ ಎಷ್ಟು ಕಷ್ಟಗಳು ಬರುತ್ತವೆಂಬುದನ್ನು ನಾನು ಹೇಳುವ ಹಾಗಿಲ್ಲ. Misappropriation ಆಗುತ್ತದೆಂದು ಹೇಳಿದಿರಿ. Misappropriation ಎನ್ನುವುದು ಶ್ಯಾನುಭೋಗ್ ಪಟೇಲರುಗಳಿಗೇ ರಿಸರ್ವ್ ಆಗಿದೆಯೇನು? ಸರ್ಕಾರದಲ್ಲಿ ನೌಕರಿಗೆ ಸೇರುವ ಪ್ರತಿಯೊಬ್ಬ ನೌಕರನನ್ನೂ ಸೆಕ್ಯೂರಿಟಿ ಕೇಳುವುದಾದರೆ ಸರಿ. ಈಗ ಆಹಾರದ ಇಲಾಖೆಯಲ್ಲಿ ಎಷ್ಟೋ ಜನ ಗುಮಾಸ್ತರುಗಳು, ಎಲ್ಲಾ ದುಡ್ಡನ್ನೂ ಹೊಡೆದುಕೊಂಡು ಹೋಗಿರುವವರು, ನೂರಕ್ಕೆ ಎಷ್ಟು ಜನರಿಲ್ಲ? ಅವರನ್ನೇನು ಮಾಡಿದ್ದೀರಿ? ಪ್ರಾಸಿಕ್ಯೂಷನ್‌ಮಾಡಿ ಜೈಲಿಗೆ ಹಾಕಿದ್ದೀರಿ! ಅದರಂತೆಯೇ ಇವರನ್ನೂ ತಪ್ಪು ಮಾಡಿದರೆ ಪ್ರಾಸಿಕ್ಯೂಷನ್‌ಮಾಡಿ ಜೈಲಿಗೆಹಾಕಿ. ಅಥವಾ ಆಸ್ತಿಯಿಲ್ಲದವನನ್ನು ನೇಮಕ ಮಾಡಿಕೊಳ್ಳಕೂಡದೆಂದು executive orderನ ಮೂಲಕ ಅವರಿಗೆ ಹೇಗೆ ಮಾಡಿದ್ದೀರೋ ಇವರಿಗೂ ಬೇಕಾದರೆ ಹಾಗೆಯೇ ಮಾಡಿ. ಅದಿಲ್ಲದೆ 20,000 ರೂಪಾಯಿಗಳ ಜಮಾ ಬಂದಿದ್ದರೆ, ಅವನು 20 ಸಾವಿರ ರೂಪಾಯಿಗಳನ್ನು ಹೊಡೆದುಕೊಂಡು ಹೋಗುತ್ತಾನೆಂದು ಭಾವಿಸಿ ಒಂದಕ್ಕೆ ಎರಡರಷ್ಟು ಸೆಕ್ಯೂರಿಟಿ ಕೊಡು ಎನ್ನುವುದು ನ್ಯಾಯವಲ್ಲ. ಆ 20,000 ರೂಪಾಯಿಗಳನ್ನೂ ಹೊಡೆದುಕೊಂಡು ಹೋಗುವವರೆಗೂ ಶೇಕ್‌ದಾರರೂ ಅಮಲ್ದಾರರೂ ಸುಮ್ಮನೆ ನೋಡಿಕೊಂಡು ಇರುತ್ತಾರೆಯೇ? ಆ 20,000 ರೂಪಾಯಿಗಳು ಅವನ ಕೈಗೆ ಬರುವುದು 5 ತಿಂಗಳಿಗೆ spread over ಆಗಿ ಕೊಂಚ ಕೊಂಚವಾಗಿ ತಿಂಗಳು ತಿಂಗಳೂ ಬರುತ್ತದೆ. ಆದ್ದರಿಂದ ಸಾಮಾನ್ಯವಾಗಿ ಒಂದು ತಿಂಗಳಿಗೆ ಅವನಲ್ಲಿ ಎಷ್ಟು ಹಣ ಇರಬಹುದು ಎಂಬುದನ್ನು ಲೆಕ್ಕಹಾಕಿಕೊಂಡು ಮಾಡಬೇಕಾದದ್ದು ನ್ಯಾಯ. ಅದಿಲ್ಲದೆ, ಈಗ ಏಕ್‌ದಂ, ಆತನಿಗೆ ಆಸ್ತಿಯಿಲ್ಲವೆಂದು ಹೇಳಿ ತಲೆ ತಲಾಂತರದಿಂದ ಮನೆತನದ ಹಕ್ಕಾಗಿ ಬಂದದ್ದನ್ನು ಅವನಿಂದ ಕಿತ್ತುಕೊಂಡು ಅವನನ್ನು ತೆಗೆಯುತ್ತೀರಾ? ಯಾವನು ಹಳ್ಳಿಯಲ್ಲಿ biggest man, richest man ಆಗಿರುತ್ತಾನೋ ಅವನಿಗೆ ಮಾತ್ರ ಪಟೇಲಗಿರಿಯಾಗಬೇಕೇ? ಏಕೆಂದರೆ ಅವನೇ ಹೆಚ್ಚಿಗೆ ಸೆಕ್ಯೂರಿಟಿ ನಿಮಗೆ ಕೊಡುವಂಥವನು. ಆದ್ದರಿಂದ ಈ ಎಲ್ಲಾ ಅಂಶಗಳನ್ನೂ ನೀವು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಇದು ಸೆಲೆಕ್ಟ್ ಕಮಿಟಿಗೆ ಹೋದಾಗ ಅವಸರ ಅವಸರವಾಗಿ ಈ ಮಸೂದೆಯನ್ನು ಪಾಸುಮಾಡದೆ, ಸ್ವಲ್ಪಮಟ್ಟಿಗೆ ಹಿಡಿದಿಟ್ಟು ಕೂಲಂಕಷವಾಗಿ ಪರಿಶೀಲನೆ ಮಾಡಿ, ಸರ್ಕಾರದ ಹಣವೂ ಅನ್ಯಾಯವಾಗಬಾರದು, ಆ ಗ್ರಾಮಾಧಿಕಾರಿಗಳ ಸ್ಥಾನಮಾನಗಳೂ ಉಳಿದುಕೊಳ್ಳಬೇಕು—ಹೀಗೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಮುಂದೆ ತುಂಬ ಹೊಡೆದಾಟ ಬರುತ್ತದೆ. Valuation Officer ಎಂಬ ಒಂದು ಹುದ್ದೆಯನ್ನೇ ಏರ್ಪಡಿಸಬೇಕಾಗಿಯೂ ಬರಬಹುದು. ಈ ಕಷ್ಟಗಳನ್ನೆಲ್ಲಾ ಯೋಚನೆಮಾಡಬೇಕು. ಏನೇ ಆಗಲಿ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಬಹಳ ಉತ್ತಮವೆಂದು ನಾನು ಹೇಳುತ್ತೇನೆ.

Mr. SPEAKER.—The House will now rise for lunch and meet at 3-30

The House adjourned for Lunch at Five Minutes past Three of the Clock and met again at Thirty-three Minutes past Three of the Clock.

[MR. SPEAKER in the Chair.]

ಶ್ರೀ ಜಿ. ನಾರಾಯಣಗೌಡ (ಮುಳಬಾಗಿಲು—ಶ್ರೀನಿವಾಸಪುರ).—ಈ ತಿದ್ದುಪಡಿ ಮಸೂದೆಯಲ್ಲಿ ಇದರ ಧ್ಯೇಯೋದ್ದೇಶಗಳ ವಿವರಣೆಯಲ್ಲಿ ಹೇಳಿರುವಹಾಗೆ, ಪಟೇಲರಾಗಲಿ, ಶ್ಯಾನುಭೋಗರಾಗಲಿ ತಪ್ಪುಮಾಡಿದ್ದಲ್ಲಿ ಅಥವಾ ಅವರಲ್ಲಿ ತಪ್ಪುಗಳು ಕಂಡುಬಂದಲ್ಲಿ ಅವರನ್ನು ತಕ್ಷಣ ಸಸ್ಪೆನ್ಷನ್‌ನಲ್ಲಿಟ್ಟು ವಿಚಾರಣೆ ನಡೆಸುವುದಕ್ಕೆ ಅವಕಾಶವಾಗುವಂತೆ ಅಧಿಕಾರ ತೆಗೆದುಕೊಂಡಿದ್ದಾರೆ. ಇದು ಸರಿಯಾಗಿದೆಯೆಂಬುದರಲ್ಲಿ ಯಾವ

(ಶ್ರೀ ಜಿ. ನಾರಾಯಣಗೌಡ.)

ಶಂಕೆಯೂ ಇಲ್ಲ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ.

ಈ ಮಸೂದೆಯ ಎರಡನೆಯ ಉದ್ದೇಶವೇನೆಂದರೆ, ಪಟೇಲ್ ಶ್ಯಾನುಭೋಗರುಗಳ ನೇಮಕದ ವಿಚಾರ. ಅವರುಗಳು ಈ ಸ್ಥಾನದಲ್ಲಿರುವುದಕ್ಕೆ ಕೆಲವು ಅರ್ಹತೆಗಳಿರಬೇಕೆಂದು ಹೇಳಿದ್ದಾರೆ. ಒಂದನೆಯ ಅರ್ಹತೆಯನ್ನು ಜಾರಿಗೆ ತರುವುದರ ಉದ್ದೇಶ ಬಹುಶಃ ಹೀಗಿರಬಹುದು. ಅನೇಕ ಸಂದರ್ಭಗಳಲ್ಲಿ ಪಟೇಲ್ ಶ್ಯಾನುಭೋಗರು ಕಂದಾಯದ ಹಣವನ್ನು ಬೇರೆ ರೀತಿಗಳಲ್ಲಿ ಉಪಯೋಗಿಸಿಕೊಂಡು ತಾವು ಕೊನೆಗೆ ಸಿಕ್ಕಿಕೊಂಡು ಕ್ರಿಮಿನಲ್ ಕೋರ್ಟುಗಳಲ್ಲಿ ವಿಚಾರಣೆಗೆ ಗುರಿಯಾಗುತ್ತಿರುತ್ತಾರೆ. ಹೀಗೆ ಕೋರ್ಟಿಗೆಳೆಯುವುದನ್ನು ತಪ್ಪಿಸಿ ಬೇರೆ ರೀತಿಯಲ್ಲಿ ಅವರನ್ನು ವಿಚಾರ ಮಾಡಿ ಅವರಿಗೊಂದು ಉಪಕಾರಮಾಡೋಣ ಎಂಬ ಒಂದು ಒಳ್ಳೆಯ ಉದ್ದೇಶದಿಂದ ಇದನ್ನು ತಂದ ಹಾಗಿದೆ. ಆದರೆ ಇದರ repercussions ಏನಿರುತ್ತವೆಂಬುದನ್ನು ಸ್ವಲ್ಪ ಗಮನಿಸುವುದಾದರೆ ಬಹಳ ತೊಂದರೆಗಳೇ ಇರುವಂತೆ ತೋರುತ್ತದೆ. ಏಕೆಂದರೆ ಅವನು, ಪಟೇಲನಾಗಲಿ, ಶ್ಯಾನುಭೋಗನಾಗಲಿ ಈ ಆಫೀಸಿಗೆ ಅರ್ಹನಾಗಬೇಕಾದರೆ, ಅತನು ಮಾಡಬೇಕಾದ ಜಮಾಬಂದಿಯ ಕನಿಷ್ಠಪಕ್ಷ ಎರಡರಷ್ಟು ಆಸ್ತಿ ಅತನಲ್ಲಿರಬೇಕೆಂದಿದೆ ; ಅದಿಲ್ಲದಿದ್ದರೆ ಜಮಾಬಂದಿಯ $\frac{1}{4}$ ಭಾಗದಷ್ಟು ಹಣವನ್ನು ಡಿಪಾಜಿಟ್ ಮಾಡಬೇಕೆಂದಿದೆ. ಈಗಿನ ಹಾಲಿ ಪರಿಸ್ಥಿತಿಯನ್ನು ನೋಡುವುದಾದರೆ, ನಮ್ಮ ದೇಶದೊಳಗೆ, ಕೆಲವು ಪಟೇಲ್ ಶ್ಯಾನುಭೋಗರುಗಳನ್ನು ಬಿಟ್ಟರೆ, ಅನೇಕರಿಗೆ ನೀವು ಹೇಳುವಷ್ಟು ಆಸ್ತಿಯೇ ಇರುವುದಿಲ್ಲ. ಇದೂ ಅಲ್ಲದೆ, ಈ ಕಾನೂನನ್ನು enforce ಮಾಡುವಾಗ ಕೆಲವು constitutional ತೊಡಕುಗಳು ಬೇರೆ ಇರುವಂತೆ ಕಾಣುತ್ತದೆ. ಇದನ್ನು ಸರ್ಕಾರದವರು ಸೆಲೆಕ್ಟ್ ಕಮಿಟಿಯವರ ಗಮನಕ್ಕೆ ತಂದು ಎಲ್ಲ ತೊಂದರೆಗಳನ್ನೂ ನಿವಾರಣೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಸಿ. ಅಂಜನೇಯರೆಡ್ಡಿ (ಚಿಂತಾಮಣಿ).—ಸ್ವಾಮಿ, ಈ ಮಸೂದೆಯನ್ನು ವಿರೋಧಿಸಿ, ಕೆಲವು ಸಲಹೆಗಳನ್ನು ಕೊಡಬೇಕೆಂದು ನನ್ನ ಆಸೆ. ಪಟೇಲ್ ಶ್ಯಾನುಭೋಗರುಗಳ ವಿಷಯದಲ್ಲಿ ಅವರುಗಳು ಗ್ರಾಮದ ಜಮಾಬಂದಿಯ $\frac{1}{4}$ ಭಾಗದಷ್ಟು cash security ಕೊಡಬೇಕೆಂದೂ, ಇಲ್ಲದಿದ್ದರೆ ಜಮಾಬಂದಿಯ 2ರಷ್ಟು ಆಸ್ತಿಯ ಸೆಕ್ಯೂರಿಟಿ ಕೊಡಬೇಕೆಂದೂ ಈ ಬಿಲ್ಲಿನಲ್ಲಿ ಹೇಳಿದೆ. ಎಷ್ಟೋ ಪಟೇಲ್ ಶ್ಯಾನುಭೋಗರುಗಳಿಗೆ ವರ್ಷಕ್ಕೆ 15 ರೂಪಾಯಿಗಳು ಕೂಡ ಪೋಟಿಗೆ ಬರುತ್ತಿಲ್ಲ. ಅಂಥವರನ್ನು ಇಷ್ಟು ಕಠಿಣವಾಗಿ ಏಕೆ ಸರ್ಕಾರದವರು ನೋಡುತ್ತಿದ್ದಾರೋ ನನಗರ್ಥವಾಗುವುದಿಲ್ಲ. ಅವರುಗಳು ಕೇವಲ 15 ರೂಪಾಯಿಗಳನ್ನು ತೆಗೆದುಕೊಂಡರೂ, ಇದೊಂದು ತಮ್ಮ ಗೌರವದ ಕೆಲಸ, ತಮ್ಮ ವಂಶಾವಳಿಯಿಂದ ಬಂದದ್ದು, ಸರ್ಕಾರದ ಸೇವೆಮಾಡಬೇಕು ಎಂಬ ಮನೋಭಾವನೆಯಿಂದ ಕೆಲಸಮಾಡುತ್ತಿದ್ದಾರೆ. ನಿಜವಾಗಿಯೂ ತಾವು ಕೊಡತಕ್ಕ ಪೋಟಿಗೆಗಾಗಿ ಅವರು ಇಂದು ಕೆಲಸಮಾಡುತ್ತಿಲ್ಲ. ನಿಜವಾಗಿಯೂ ದೇಶಸೇವೆಮಾಡಬೇಕೆಂಬ ಮನೋಧರ್ಮದಿಂದ ಅವರು ಬಹಳ ಮಟ್ಟಿಗೆ ದುಡಿದುಕೊಂಡು ಬರುತ್ತಿದ್ದಾರೆ. ಹೀಗಿರುವಾಗ ಒಂದೊಂದು ವಿಧದಲ್ಲಿಯೂ ಅವರ ಮೇಲೆ ಕಠಿಣವಾಗಿ ವರ್ತಿಸುತ್ತಿದ್ದೀರಿ. ಚುನಾವಣೆ ವಿಚಾರದಲ್ಲಿ ಅವರುಗಳೂ ಸರ್ಕಾರಿ ನೌಕರರು, ಚುನಾವಣೆಗೆ ನಿಲ್ಲುಕೂಡದು ಎಂಬ ಕಾನೂನು ಮಾಡಿದಿರಿ. ಈಗ ಸೆಕ್ಯೂರಿಟಿ ಬೇಕೆಂದು ಕೇಳುತ್ತಿದ್ದೀರಿ. ಇಂಥ ಸೆಕ್ಯೂರಿಟಿಗಳನ್ನು ಕೊಡುವುದಕ್ಕೆ ಅರ್ಧಭಾಗಕ್ಕೆ ಮೇಲ್ಪಟ್ಟು ಜನರಿಗೆ ಶಕ್ತಿಯಿಲ್ಲ. ಹಣ ದುರುಪಯೋಗ ಪಡಿಸಿಕೊಳ್ಳುತ್ತಾರೆಂದು ಒಂದುವಾದ ಇಡಬಹುದು. ಅದಕ್ಕೆ ಕಾನೂನು ಇದ್ದೇ ಇದೆ. 8 ಅಣೆ ದಸ್ತುಮಾಡಿದ ಪಕ್ಷದಲ್ಲಿ ಸರ್ಕಾರದವರು action ತೆಗೆದುಕೊಂಡು ಸಜಾಕೊಡಿಸಿರುವ ಅನೇಕ ನಿದರ್ಶನಗಳೂ ಇವೆ. ಇಂಥದರಲ್ಲಿ ಎಷ್ಟೋ ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಪದ್ಧತಿಯನ್ನು ತಪ್ಪಿಸಿ, ಅವರ ಹಕ್ಕನ್ನು ಕಿತ್ತುಕೊಳ್ಳುವ ಉದ್ದೇಶವನ್ನು ಒಳಗಡೆ ತೆರೆಯ ಮರೆಯಲ್ಲಿಟ್ಟುಕೊಂಡು ಈ ಬಿಲ್ಲನ್ನೀಗ ತಂದಿರುವಂತೆ ಕಾಣುತ್ತದೆ. ಏಕೆಂದರೆ, ಯಾರಿಗೆ ನೀವು ಹೇಳಿದಂತೆ ಸೆಕ್ಯೂರಿಟಿ ಕಟ್ಟಲಿಕ್ಕೆ ಶಕ್ತಿಯಿಲ್ಲವೋ ಅವನು ಈ ಹಕ್ಕನ್ನು ಕಳೆದುಕೊಂಡಂತಾಗುತ್ತದೆ. ಎಷ್ಟೋ ವರ್ಷಗಳಿಂದ ಬಂದಂಥ ಪಟೇಲ್ ಶ್ಯಾನುಭೋಗಿಕೆ ಹಕ್ಕನ್ನು ಕಿತ್ತುಕೊಳ್ಳುವ ದುರುದ್ದೇಶದಿಂದ ಈ ಬಿಲ್ಲು ಬಂದಿದೆಯೆಂದು ಭಾವನೆಮಾಡಬೇಕಾಗಿದೆ. ಕೇವಲ ಒಂದು ಗೌರವದ ದೃಷ್ಟಿಯಿಂದ, ಪೋಟಿಗೆಯ ಆಸೆಯಿಂದಲ್ಲದೆ ಸರ್ಕಾರದ ಮೇಲ್ಮೆಗಾಗಿ ದುಡಿಯತಕ್ಕಂಥ ಈ ಜನರಿಗೆ ಈ ಗತಿಯೇ ! ಕೆಲವು ಮಾನ್ಯಮಿತ್ರರು ಹಳ್ಳಿಗಳಲ್ಲಿ ಪಟೇಲ್ ಶ್ಯಾನುಭೋಗರು ಬಹಳ powerful ಆಗಿರುತ್ತಾರೆಂದು ಹೇಳಿದರು. Powerful ಎನ್ನುವುದಕ್ಕೆ ನೀವು ಕೊಟ್ಟಿರುವ ಅಧಿಕಾರತಾನೆ ಏನು ? ಆ ಅಧಿಕಾರಗಳನ್ನು ಅವರು ಎಷ್ಟರಮಟ್ಟಿಗೆ ಉಪಯೋಗಿಸಬಹುದು ನೀವೇ ಹೇಳಿ. ಅವರಿಗೆ ಕೊಟ್ಟಿರತಕ್ಕ ಅಧಿಕಾರದಿಂದ ಬಹಳ ಮಟ್ಟಿಗೆ influence wield ಮಾಡುತ್ತಾರೆಂದರೆ ಅದರರ್ಥ ನನಗೆ ಗೊತ್ತಾಗುವುದಿಲ್ಲ. ಅಂಥ ವರ್ಚಸ್ಸು ಅವರಲ್ಲಿದೆ ಎಂಬುದನ್ನು ತಾವು ಮನಗಂಡಿದ್ದರೆ ಬಹುಶಃ ತಾವು ಈ ಬಿಲ್ಲನ್ನೇ ತರುತ್ತಿರಲಿಲ್ಲವೆಂದು ನಾನು ಹೇಳಬಲ್ಲೆ. ಕೇವಲ ಗೌರವಕ್ಕಾಗಿ ಆ ಸ್ಥಾನಗಳನ್ನಿಟ್ಟುಕೊಂಡಿದ್ದಾರೆ ಅಷ್ಟೆ. ಆದ್ದರಿಂದ ಈ ಮಸೂದೆಯನ್ನು ಎಲ್ಲರೂ ತಿರಸ್ಕರಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಅಧ್ಯಕ್ಷರೆ, ಈ ತಿದ್ದುಪಡಿ ಮಸೂದಾ ಕಾನೂನನ್ನು ತಂದಿರುವ ಉದ್ದೇಶ ಇಲ್ಲಿ ಅಚ್ಚಾಗಿ ನಮಗೆ ಹಸ್ತಗತವಾಗಿದೆ. ಇದನ್ನೂ, ಈವರೆಗೆ ಮಾನ್ಯ ಸದಸ್ಯರು ತಿಳಿಸಿರತಕ್ಕ ವಿಷಯಗಳನ್ನೂ ಕೂಲಂಕಷವಾಗಿ ವಿಮರ್ಶೆ ಮಾಡಿ ನೋಡಿದರೆ, ಒಬ್ಬ ಮನುಷ್ಯನನ್ನು ಒಂದೇ ಸಾರಿ ಕೊಲ್ಲುವುದಕ್ಕೆ ಬದಲಾಗಿ ಸ್ವಲ್ಪ ಸ್ವಲ್ಪ ವಿಷ ಕೊಟ್ಟು ಚಿತ್ರಹಿಂಸೆ ಕೊಟ್ಟು ಕೊಲ್ಲುವ ಉದ್ದೇಶದಿಂದ ಇದನ್ನು ತಂದಂತೆ ಕಾಣುತ್ತದೆ. ಮಾನ್ಯ ಸದಸ್ಯರಾದ ಭೀಮಪ್ಪನಾಯಕರು ಹೇಳಿದಂತೆ, ಒಂದೇ ಸಾರಿ ಶ್ಯಾನುಭೋಗಿಕೆ, ಪಟೇಲಿಕೆ ತಪ್ಪಿಸಿ ಅವರನ್ನು ಮನೆಗೆ ಹೋಗಿ ಎಂದು ಹೇಳುವುದಕ್ಕೆ ಬದಲು, ಅಡ್ಡಿ ಆತಂಕಗಳನ್ನು ತಂದೊಡ್ಡಿ ಅವರಾಗಿಯೇ ಮನೆಗೆ ಬಿಟ್ಟು ಹೋಗುವಂತೆ ಮಾಡಿದ್ದೀರಿ, ಅಷ್ಟೆ !

ಶ್ರೀ ಕಡಿದಾಳ್ ಮಂಜಪ್ಪ.—ಆ ಉದ್ದೇಶವಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅದಕ್ಕೆ ಕಾರಣಗಳನ್ನು ನಾನು ಕೊಡಬಲ್ಲೆ. ಅವರನ್ನು ಹುದ್ದೆಯಿಲ್ಲದಂತೆ ಮಾಡಲು ಅಮಾಲ್ದಾರರಿಗೆ, ಡೆಪ್ಯುಟಿ ಅಮಲ್ದಾರರಿಗೆ ಅಧಿಕಾರ ಈ ಮಸೂದೆಯಲ್ಲಿ ಕೊಟ್ಟಿದೆ. ಅದೂ ಈ ಅಮಲ್ದಾರರುಗಳನೇಕರು, ಡೆಪ್ಯುಟಿ ಅಮಲ್ದಾರರುಗಳನೇಕರು ನ್ಯಾಯವಾಗಿ ಪ್ರೊಬೇಷನರುಗಳಾಗಿ ಕೆಲಸ ಮಾಡಿಕೊಂಡು ಈ ಹುದ್ದೆಗಳಿಗೆ ಬಂದಿಲ್ಲ.

ಎಷ್ಟೋ ಜನ ಗುಮಾಸ್ತರುಗಳಾಗಿದ್ದು ಈ ಹುದ್ದೆಗಳಿಗೆ ಬಂದಿರುತ್ತಾರೆ. ಈ ಮಸೂದೆಯಲ್ಲಿ 'ದುರ್ವರ್ತನೆ' ಎಂಬ ಪದವನ್ನು ಪಯೋಗಿಸಿದ್ದಾರೆ. ಹಣದ ದಸ್ತಿನ ಅಪಾದನೆಯಾಗಲಿ, ಅಧಿಕಾರ ದುರುಪಯೋಗಪಡಿಸಿಕೊಂಡ ಅಪಾದನೆಯೆಂದಾಗಲಿ ಹೇಳಿದ್ದರೆ ಸ್ಪಷ್ಟವಾಗಿರುತ್ತಿತ್ತು. ದುರ್ವರ್ತನೆಯೆನ್ನುವುದು ಯಾವ ರೀತಿಯ ಅಪಾದನೆಯೋ ಗೊತ್ತಿಲ್ಲ. ಇದರಿಂದ ಅಮಲ್ದಾರರು ಮನಸ್ಸಿಗೆ ಬಂದಹಾಗೆ ವ್ಯಾಖ್ಯಾನ ಮಾಡಿಕೊಂಡು ಪಟೇಲ್ ಶ್ಯಾನುಭೋಗರು ಎದ್ದರೆ, ಕೂತರೆ ತಪ್ಪೆಂದು ಭಾವಿಸಿ ಅಧಿಕಾರದಿಂದ ಓಡಿಸುವುದಕ್ಕೆ ಇದರಲ್ಲಿ ಅವಕಾಶವಿದೆ. ಇದರಿಂದ ಪಟೇಲ್ ಶ್ಯಾನುಭೋಗರುಗಳಿಗೆ ಬಹಳ ಕಿರುಕುಳ ಬರುತ್ತದೆಂಬುವನ್ನು ಹೇಳಬೇಕಾಗಿಲ್ಲ. ಈ ದೃಷ್ಟಿಯಿಂದ ಈ ಅಧಿಕಾರವನ್ನು ಅಮಲ್ದಾರರಿಗೂ ಡೆಪ್ಯುಟಿ ಅಮಲ್ದಾರರಿಗೂ ಕೊಡದೆ ಸಬ್‌ಡಿವಿಜನ್ ಆಫೀಸರಿಗಾಗಲಿ, ಡೆಪ್ಯುಟಿ ಕಮಿಷನರಿಗಾಗಲಿ ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಜಾಮೀನು ಕೊಡುವ ಸಂದರ್ಭದಲ್ಲಿ ನಿರಾವರಿ ಪ್ರದೇಶಗಳಲ್ಲಿ ಸೆಸ್ಸು, ಕಂಟ್ರಿಬ್ಯೂಷನ್ ವಗೈರೆ ಸೇರಿಕೊಂಡು 20,000 ರೂಪಾಯಿಗಳಿಗೂ ಮೇಲ್ಪಟ್ಟು ಜಮಾಬಂದಿ ಇರುವ ಸಮ್ಮಿವೇಶಗಳಿರುತ್ತವೆ. ಅಂಥ ಸಂದರ್ಭಗಳಲ್ಲಿ ಜಮಾಬಂದಿಯ ಎರಡರಷ್ಟು ಆಸ್ತಿಯಿರಬೇಕೆಂದು ಹೇಳಿದರೆ 100ಕ್ಕೆ 97 ಸಂದರ್ಭಗಳಲ್ಲಿ ಯಾರಿಗೂ ಅಷ್ಟು ಆಸ್ತಿಯೇ ಇರುವುದಿಲ್ಲ; ಅಂಥ ಐಶ್ವರ್ಯವಂತರಿರುವುದೇ ಕಡಮೆ. ಆದ್ದರಿಂದ ಇಷ್ಟು ಆಸ್ತಿಯಿದ್ದರೇನೆ ಅವರುಗಳು ಹಣವನ್ನು ಜವಾಬ್ದಾರಿಯಿಂದ ವಸೂಲುಮಾಡಿ ಏನೂ ದುರುಪಯೋಗ ಮಾಡಿಕೊಳ್ಳದೆ ಸರ್ಕಾರಕ್ಕೆ ಸಲ್ಲಿಸುತ್ತಾರೆಂದು ಭಾವಿಸುವುದು ತಪ್ಪುಭಾವನೆ. ಎಷ್ಟೋ ಸಂದರ್ಭಗಳಲ್ಲಿ ಐಶ್ವರ್ಯವಂತರಲ್ಲದವರೂ, ಆಸ್ತಿಯಿಲ್ಲದಿರುವವರೂ ನಿಷ್ಠರಾಗಿ ಸತ್ಯವಂತರಾಗಿ ಕೆಲಸಮಾಡಿರುವ ಸಂದರ್ಭಗಳಿವೆ, ಆದ್ದರಿಂದ ಬರೀ ಆಸ್ತಿಯಿಂದ ಸತ್ಯವಂತರಾಗಿರುತ್ತಾರೆ, ದುರುಪಯೋಗಪಡಿಸಿಕೊಳ್ಳುವುದಿಲ್ಲ, ದುರುಪಯೋಗಪಡಿಸಿಕೊಂಡರೂ ಅವರನ್ನು ಹಿಡಿದುಹಾಕಬಹುದು ಎಂಬ ವಾದ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ, ಹಣದ ದುರುಪಯೋಗ ಮಾಡುತ್ತಾರೆ-ಬ ಸಂಶಯ ಬಂದರೆ ಅದನ್ನು ತಪ್ಪಿಸುವುದಕ್ಕೆ ಅನೇಕ ವಿಧಾನಗಳಿವೆ. ಅವು ಈಗಿರತಕ್ಕ ಕಾನೂನಿನಲ್ಲೇ ಅಡಕವಾಗಿವೆ, ಲ್ಯಾಂಡ್ ರೆವೆನ್ಯೂ ಕೋಡ್‌ನಲ್ಲಿವೆ. ಜಾಮೀನು ಕೇಳಿರುವುದನ್ನು ಕೊಟ್ಟರೆ, ಹಕ್ಕುದಾರ ಅವನ ಮನೆತನದ ಹಕ್ಕಿನ ಮೇಲೆ ಅಧಿಕಾರವನ್ನು ಪಡೆಯುತ್ತಾನೆ, ಇಲ್ಲದಿದ್ದರೆ ಇಲ್ಲ-ಎಂದರೆ ಇದರಿಂದ ಮೂಲ ತತ್ವಕ್ಕೇ ತಿಲಾಂಜಲಿ ಕೊಟ್ಟಂತಾಗುತ್ತದೆ. ಒಟ್ಟಿನಲ್ಲಿ ಇದು ಮೂಲ ಕಾನೂನಿಗೆ ವಿರೋಧವಾಗಿರುವುದರಿಂದ, ಸಮಂಜಸವಾಗಿಲ್ಲವಾದುದರಿಂದ ಈಗ ಇದನ್ನು ಜಾರಿಗೆ ತರುವುದಕ್ಕಿಂತ ನಿಲ್ಲಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

*ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ).—ಸ್ವಾಮಿ, ಈ ತಿದ್ದುಪಡಿ ಮಸೂದಾ ಕಾನೂನಿನ ಮೇಲೆ ಮಾತನಾಡುತ್ತಾ ನನ್ನ ಅನುಭವವನ್ನು ಸಭೆಯ ಗಮನಕ್ಕೆ ತರುತ್ತೇನೆ, ನಾನು ಈ ಸಭೆಗೆ ಸದಸ್ಯನಾಗಿ ಬರುವದಕ್ಕಿಂತ ಮುಂಚೆ ಒಬ್ಬ ಪಟೇಲನಾಗಿದ್ದು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಂದಿದ್ದೇನೆ. ಮೈಸೂರು ಸಂಸ್ಥಾನದಲ್ಲಿರುವ ಪಟೇಲ್ ಶ್ಯಾನುಭೋಗರಿಗೆ ಹೆಚ್ಚು ಅಧಿಕಾರವನ್ನು ಕೊಟ್ಟಿಲ್ಲ. ಇವರಿಗಿರುವ ಅಧಿಕಾರವೇನೆಂದರೆ, ರೈತರಿಂದ ಕಂದಾಯ ವಸೂಲುಮಾಡಿ ಸರ್ಕಾರದ ಖಜಾನೆಗೆ ಕಟ್ಟುವುದು, ಗ್ರಾಮದಲ್ಲಿ ಕೃತ್ಯಗಳು ನಡೆದರೆ ಅವುಗಳನ್ನು ವರದಿ ಮಾಡುವುದು, ಜನನ ಮರಣ ಲೆಕ್ಕವನ್ನು ಕೊಡುವುದು, ಇಷ್ಟೇ. ಮದರಾಸಿನಲ್ಲಿ ಇವರಿಗೆ ಅಧಿಕಾರಗಳಿವೆ. ತಕ್ಸೀರಾದರೆ ವಿಚಾರಣೆಮಾಡಿ ಜುಲ್ಮಾನೆ ಹಾಕುವ ಅಧಿಕಾರವಿದೆ, ಇನ್ನೂ ಬೇರೆ ಅಧಿಕಾರವಿದೆ. ಇಂಥ ಅಧಿಕಾರಗಳನ್ನು ಪಟೇಲ್ ಶ್ಯಾನುಭೋಗರಿಗೆ ಮೈಸೂರು ದೇಶದಲ್ಲಿ ಕೊಟ್ಟಿಲ್ಲ. ಅವರಿಗೆ ಈಗಿರತಕ್ಕ ಅಧಿಕಾರಕ್ಕೆ ಜನರು ಅವರಿಗೆ ಹೆದರುತ್ತಾರೆ, ತಲೆಬಾಗುತ್ತಾರೆ ಎಂದು ಹೇಳುವ ವಾದ ಸರಿಯಲ್ಲ. ಪ್ರಭಾವಶಾಲಿಗಳಾದ ವ್ಯಕ್ತಿಗಳು ಅವರಿಗೆ ಪಟೇಲಿ ಇದ್ದರೂ ಪ್ರಭಾವಶಾಲಿಗಳಾಗಿರುತ್ತಾರೆ, ಇಲ್ಲದಿದ್ದರೂ ಪ್ರಭಾವಶಾಲಿಗಳಾಗಿರುತ್ತಾರೆ. ಮನುಷ್ಯ ಪ್ರಭಾವಶಾಲಿಯಾಗಿರಬೇಕಾದರೆ ಅವನಿಗೆ ಕೆಲವು ಗುಣಗಳಿರಬೇಕು. ಇಲ್ಲದಿದ್ದರೆ ಒಂದು ಘಳಿಗೆಯೂ ಪ್ರಭಾವ ಬೀರಲು ಯಾರೂ ಅವಕಾಶ ಕೊಡುವುದಿಲ್ಲ. ಸರ್ಕಾರ ಅವರನ್ನು ಡಿಸ್‌ಮಿಸ್ ಮಾಡಬಹುದು, ಸಸ್‌ಪೆಂಡ್ ಮಾಡಬಹುದು ಎಂದು ನಿಯಮವಿರುವಾಗ, ಎಲ್ಲ ಶಿಕ್ಷೆಗಳನ್ನೂ ಅವರಿಗೆ ಕೊಡಿಸಲು ಅವಕಾಶವಿರುವಾಗ, ಜನರು ಅವರಿಗೆ ತಲೆಬಾಗುತ್ತಾರೆ, ಅವರಪ್ರಭಾವಕ್ಕೊಳಗಾಗುತ್ತಾರೆ ಎಂದು ಹೇಳುವ ವಾದ ಅನ್ಯಾಯವಾದ ಒಂದು ಅರೋಪಣೆಯೆಂದು ಭಾವಿಸುತ್ತೇನೆ. ಈಗ ಅನೇಕ ತಲೆಮಾರುಗಳಿಂದ ಪಟೇಲ್ ಶ್ಯಾನುಭೋಗಿ ಎಂದು ನಡೆದುಕೊಂಡು ಬಂದಿದೆ. ಸರ್ಕಾರಕ್ಕೆ ಅವರು ವಿಧೇಯತೆಯಿಂದ, ನಮ್ರತೆಯಿಂದ ತಮಗೆ ಕೊಡತಕ್ಕ ಪೋಟಿಗೆಯನ್ನು ಸಂಪಾದನೆ ಎಂದು ತಿಳಿಯುಕೊಳ್ಳದೆ ಸೇವಾ ದೃಷ್ಟಿಯಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಸರ್ಕಾರದ ಬೊಕ್ಕಸವನ್ನು ತುಂಬಿಸಬೇಕಾದರೆ ಇವರು ಮೂಲಸ್ತಂಭ. ಇಂಥ ನಿರಪರಾಧಿಗಳನ್ನು ಈ ರೀತಿ ನಿರ್ಬಂಧಿಸುವುದು, ಇದೇನು ಅವರಿಗೆ ಕೊಡತಕ್ಕ ಉಡುಗೊರೆಯೆ ಅಥವಾ ಬಳುವಳಿಯೆ ಎಂದು ಕೇಳುತ್ತೇನೆ. ಅವರಿಗಿರುವುದು ವಂಶಪಾರಂಪರ್ಯವಾಗಿ ಬಂದಿರತಕ್ಕ ಅಧಿಕಾರ. ಈ ಅಧಿಕಾರವನ್ನು ಯಾರೋ ಒಬ್ಬಿಬ್ಬರು ಮಾಡತಕ್ಕ ಅನ್ಯಾಯಕ್ಕಾಗಿ ಕುಂಠಿತಗೊಳಿಸುವುದು, ಇಂಥ ಒಂದು ಕಾನೂನು ಮಾಡಿ ಎಲ್ಲರಿಗೂ ಅನ್ವಯಿಸುವುದು ನ್ಯಾಯವೂ ಅಲ್ಲ ನೀತಿಯೂ ಅಲ್ಲ ಎಂದು ಒತ್ತಿ ಹೇಳುತ್ತೇನೆ. ಆಸ್ತಿ ಹೆಚ್ಚಾಗಿರಬೇಕೆಂದರೆ, ಅವರಿಗೆ ಯಾರೂ ಕೊಡುವುದಿಲ್ಲ. ಬೇರೆ ಯಾವ ಮಾರ್ಗದಿಂದಲೂ ಬರುವುದಿಲ್ಲ. ಏನಾದರೂ ಅಪರಾಧ ಮಾಡಿದರೆ, ಕ್ರಿಮಿನಲ್ ತಕ್ಸೀರಿಗೊಳಗಾದರೆ, ಕೆಲಸದಿಂದ ತೆಗೆದುಹಾಕುವುದಕ್ಕೆ ಈಗಿರತಕ್ಕ ಕಾನೂನಿನಲ್ಲೇ ಅವಕಾಶವಿದೆ.

ಈಗ ಸಭೆಯ ಮುಂದಿರತಕ್ಕ ಮಸೂದೆಯನ್ನು ವಿಮರ್ಶೆಮಾಡಿ ನೋಡಿದರೆ, ತನ್ನ ಗ್ರಾಮದ ಒಟ್ಟು ಜಮೀನು ಕಂದಾಯದ ಕಾಲುಭಾಗವನ್ನು ಸೆಕ್ಯೂರಿಟಿಯಾಗಿ ಕಟ್ಟಬೇಕೆಂದು ವಿಧಾಯಕಮಾಡಿದೆ. ಒಂದು ಊರಿನ ಜಮೀನು ಕಂದಾಯ ಒಂದು ಸಾವಿರವಾದರೆ ಅದರಲ್ಲಿ ಕಾಲುಭಾಗವನ್ನು ಕಟ್ಟಬೇಕಾಗುತ್ತದೆ. ವಸೂಲಾದ ಹಣವನ್ನು ದುರುಪಯೋಗಪಡಿಸಬಹುದೆಂಬ ಹೆದರಿಕೆಯಿಂದ ಹೀಗೆ ಮಾಡುವುದಾದರೆ, ಸಾವಿರ ರೂಪಾಯಿ ವಸೂಲುಮಾಡಿ ತೆಗೆದುಕೊಂಡು ಹೊರಟುಹೋದರೆ, ಇನ್ನು 750 ರೂಪಾಯಿ ಹೋದರೆ ಚಿಂತೆಯಿಲ್ಲವೆಂದು ಅಭಿಪ್ರಾಯವೆ? ಇಂಥ ಒಂದು ತಿದ್ದುಪಡಿಯಿಂದ ಸರ್ಕಾರದ ಉದ್ದೇಶ ಸಾಧನೆಯಾಗುವುದಿಲ್ಲ. ಸರ್ಕಾರದಲ್ಲಿ ಸೇವಾಮನೋಭಾವದಿಂದ ಕೆಲಸ ಮಾಡುವವರನ್ನು ಹೀಗೆ ನಿರ್ಬಂಧ ಮಾಡುವುದು ಸರಿ

(ಶ್ರೀ ಹೆಚ್. ಕೆ. ಶಿವರುದ್ರಪ್ಪ.)

ಯಲ್ಲ. ಇಂಥವರಿಗೆ ಇನ್ನೂ ಪ್ರೋತ್ಸಾಹಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳಬೇಕು. ಹೀಗೆ ಮಾಡಿದರೆ ಅವರಿಗೆ ಸರ್ಕಾರದಲ್ಲಿ ವಿಶ್ವಾಸ ಹುಟ್ಟುವುದಿಲ್ಲ. ಆದುದರಿಂದ ಇದನ್ನು ನಾನು ವಿರೋಧಿಸುತ್ತೇನೆ.

Sri KADIDAL MANJAPPA.—Sir, some of the Hon'ble Members spoke as though the Government have thought of bringing this Bill with the idea of gradually eliminating these village offices. The proposal is not new. A committee was constituted in the year 1943, when the Hon'ble Leader of the Opposition was a Minister. That committee, among other things, has recommended that some of the provisions contained in the Village Offices Act including Sections 7 and 8 had to be amended. Thereafter in the year 1951, the Revenue Commissioner had sent up proposals to amend these two Sections on the lines suggested in the Bill. In 1945 a Government Order has been passed to the effect that such an amending Bill should be brought before the Legislature. I have not thought of this devise for the first time to eliminate these people. The Revenue Commissioner is particular that the Village Offices Act should be amended as suggested in the present Bill so as to enforce discipline among the village officers and also as a sort of security for the Government. The village officer, whether he be a Shanbhogue or a Patel, holds a responsible position. He handles money. Hon'ble Members are well aware of the fact that even Government servants who are handling money are required to furnish security. My friend Sri Linganna said that the Bill is *ultra vires* of the Village Offices Act. The appointment of a person as a Village Officer is subject to certain conditions specified in Section 8 of the Village Offices Act. These conditions are prescribed in the Act. "No person shall be eligible for appointment who is not of the male sex." because a woman, if she is the daughter of a barawarder, cannot claim that she must be appointed as Patel—"has not attained majority"—this is not repugnant to the Constitution; what is mentioned in the Constitution shall prevail—"is not physically and mentally capable of discharging the duties of the office, has not qualified according to the education test"—even if the man is the son of a barawardar, if he is an illiterate person, he cannot claim to be appointed as a Shabhogue or Patel. So the objection raised by my friend Sri Linganna is not at all tenable. The appointment of a Shanbhogue or a Patel either temporarily or permanently is subject to the rules or the law in force.

Sri M. LINGANNA.—But the hereditary rules prevail there.

Sri KADIDAL MANJAPPA.—As my friend Sri Linganna says, a person cannot be appointed as Shanbhogue or Patel merely because it is hereditary and he is a successor. I have clarified the position. Merely because the person is the son of a barawardar, he cannot claim to be appointed as a village officer, unless he is qualified according to Section 8.

Regarding the enquiry and the provision made in the Bill for suspending the officer before enquiry, it is well known to you that Government servants are kept under suspension as soon as a *prima facie* case is made out. Supposing a charge sheet is placed on a Government servant for defalcation or misappropriation of moneys or falsification of accounts, it need not be established. He can be straight away kept under suspension without further enquiry. Under the amending Bill what we have proposed is that a village officer can be kept under suspension if a *prima facie* case is made of his misconduct.

Sri M. LINGANNA.—Even Section 71 says so.

Sri KADIDAL MANJAPPA.—No, there is a lot of difference. My friend Sri Linganna is engaging his attention on politics more than on law.

So a village officer cannot be suspended unless an enquiry is held and that enquiry is concluded and an ultimate finding is given when there is a complaint. Supposing there is a village officer who misappropriates Government money.

(*Interruption*).

Mr. SPEAKER.—Sri Linganna. You are interfering too much. You must read the Section before you put questions. It reads "the Deputy Commissioner may of his own motion or complaint . . ."

Sri M. LINGANNA.—That should be considered with other things.

Mr. SPEAKER.—You are repeating.

Sri KADIDAL MANJAPPA.—Suppose a village officer commits an offence or is guilty of misconduct, an enquiry has to be proceeded against him. If he continues to hold office, can you expect persons to depose against him. Even in the case of Government servants . . . .

ಶ್ರೀ ಟಿ. ಎನ್. ಮುಡಲಗಿರಿಗೌಡ.—(ಕುಣಿಗಲು) ಯಾರು enquiry ಮಾಡುವವರು ? ಅಮಲ್ದಾರರೊ, ಡೆಪ್ಯುಟಿ ಅಮಲ್ದಾರರೊ, ಡೆಪ್ಯುಟಿಕಮೀಷನರೋ ಅಥವಾ ಈ ಎಲ್ಲರಿಗೂ ಮೇಲಿನ ಅಧಿಕಾರಿಗಳೊ ?

4 P.M.

Sri KADIDAL MANJAPPA.—This is not the correct view. Some members said that the village officers, Patel or a Shanbhog, are continuing to stick on to their jobs merely as a place of honour and not for the sake of remuneration. It is true that many of them are sticking on to those places for the sake of honour they get or the prestige they command. But at the same time, you must understand that Government money should be saved. It is the State's money. The Hon'ble Member Sri Mohamed Imam was a Minister. How many cases of misappropriation and falsification of accounts every year have been brought to the notice of Government ? In the Visvesvaraya Canal area there are perhaps more than one thousand cases of misappropriation. They collected money and afterwards some of them have resigned. What is the hold on them ? Nothing. They have no property. When we demand from the raiyats contribution and water rate they say they have paid to the Patel or Shanbhog. This aspect also must be borne in mind. The Bill is not introduced to harass these people but it is only with the idea of safeguarding the public monies. Sri S. Gopala Gowda said that some Ministers though they did not own property would become Ministers. That analogy does not hold good. The Ministers command the confidence of the majority of the people in the State. They are elected persons and are in the Government due to the confidence that the public retain in them. Therefore that analogy does not hold good. Besides, they do not handle money.

With these remarks, I submit that I have no objection even if the Bill is referred to a Select Committee. Let it be thrashed out there.

Mr. SPEAKER.—The question is:

"That the Mysore Village Offices (Amendment) Bill, 1953, be taken into consideration."

The motion was adopted.

Sri S. SRINIVASA IYENGAR.—Sir, I move:

"That the Mysore Village Offices (Amendment) Bill, 1953, be referred to a Select Committe, consisting of—

Sriyuths.—

(1) K. Pattabhiraman,
(2) J. Mohamed Imam,
(3) B. P. Nagaraja Murthy,
(4) A. Bheemappa Naik,
(5) N. Hutchmasthy Gowda,
(6) K. Puttaswamy and
(7) the Mover.

Mr. SPEAKER.—Motion moved:

"That the Mysore Village Offices (Amendment) Bill, 1953,

(MR. SPEAKER.)

be referred to a Select Committe, consisting of—

Sriyuths.—

(1) K. Pattabhiraman,
(2) J. Mohamed Imam,
(3) B. P. Nagaraja Murthy,
(4) A. Bheemappa Naik,
(5) N. Hutchmasthy Gowda,
(6) K. Puttaswamy and
(7) the Mover.

Sri KADIDAL MANJAPPA.—I proposed that a few more persons may be added. Sri M. Madiah, Sri S. Kariappa, Sri A. V. Narasimha Reddy and Sri D. Devaraj Urs.

Sri S. SRINIVASA IYENGAR.—I accept.

Sri J. MOHAMED IMAM.—Sri H. K. Sivarudrappa may be included because he is a maji Patel.

Sri S. SRINIVASA IYENGAR.—I accept.

Mr. SPEAKER.—The question is:

"That the Mysore Village Offices (Amendment) Bill, 1953, be referred to a Select Committe, consisting of—

Sriyuths.—

(1) K. Pattabhiraman,
(2) J. Mohamed Imam,
(3) B. P. Nagaraja Murthy,
(4) A. Bheemappa Naik,
(5) N. Hutchmasthy Gowda,
(6) K. Puttaswamy,
(7) M. Madiah,
(8) S. Kariappa,
(9) A. V. Narasimha Reddy,
(10) D. Devaraj Urs,
(11) H. K. Sivarudrappa and
(12) the Mover.

The motion was adopted.

Mr. SPEAKER.—Under Rule 56 the Minister in charge of the Bill and also the Minister for Law will be on the Committee. Under Rule 57, I appoint the Minister for Law to be the Chairman of the Committee.

MYSORE PUBLIC HEALTH (AMENDMENT) BILL, 1953.

Motion to consider.

Sri T. CHANNIAH (Minister for Public Health and Local Self-Government).—Sir, I move:

"That the Mysore Public Health (Amendment) Bill, 1953, be taken into consideration."

Clause (*c*) and (*d*) of Sub-section (1) of Section 4 of the Public Health Act provides for election of two Members each from the Legislative Council and the Representative Assembly to the Public Health Board. On the abolition of the Representative Assembly and the setting up of the Legislative Assembly, Clause (*d*) of sub-section (1) of Section 4 of the Act requires amendment to provide for election of two Members of the Legislative Assembly. The term of Members elected by the Legislature, under Clauses (*c*) and (*d*) of sub-Section (1) to the Public Health Board constituted under Section 4, is fixed at one year. But the term of non-official members nominated by the Government under Clause (*e*) has not been fixed. It is proposed to fix their term at two years.

Mr. SPEAKER.—The question is:

"That the Mysore Public Health (Amendment) Bill, 1953, be taken into consideration."

The motion was adopted.

Mr. SPEAKER.—Clause 2. The question is:

"That Clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 1. The question is:

"That Clause 1 stand part of the Bill."

The motion was adopted.